بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّي عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 03

ಸಂಚಿಕೆ: 19

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

12 ಮೇ 2022, 12 ಹಿಜ್ರತ್ 1401 ಹಿಜರಿ ಶಮ್‌ಸಿ,
10 ಶವ್ವಾಲ್ 1443 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَمَا نُرْسِلُ الْمُرْسَلِيْنَ
اِلَّا مُبَشِّرِيْنَ وَمُنْذِرِيْنَ
فَمَنْ اٰمَنَ وَاَصْلَحَ فَلَا خَوْفٌ عَلَيْهِمْ
وَلَا هُمْ يَحْزَنُوْنَ (سورة الانعام:49)

**(ಅಲ್ ಅನ್‌ಆಮ್ : 49)**

**ಅಂದರೆ: ಶುಭವಾರ್ತೆ ನೀಡುವ ಮತ್ತು ಮುನ್ನೆಚ್ಚರಿಕೆ ಕೊಡುವವರಾಗಿ ಹೊರತು ನಾವು ಪ್ರವಾದಿಗಳನ್ನು ಕಳುಹಿಸುವುದಿಲ್ಲ. ಯಾರು ವಿಶ್ವಾಸ ಹೊಂದಿ ಸ್ವಯಂ ತಿದ್ದಿಕೊಳ್ಳುತ್ತಾರೋ ಅವರಿಗೆ ಏನೂ ಭಯವಿಲ್ಲ; ಅವರಿಗೆ ಯಾವ ವ್ಯಥೆಯೂ ಇಲ್ಲ.**

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ಸೆಹ್ರಿ ತಿನ್ನುವುದರಲ್ಲಿ ಅನುಗ್ರಹವಿದೆ

**(1923)** ಹಝ್ರತ್ ಅನಸ್ ಬಿನ್ ಮಲಿಕ್(ರ) ವರದಿ ಮಾಡುತ್ತಾರೆ ಪ್ರವಾದಿ(ಸ) ಹೇಳಿದರು: ಸೆಹ್ರಿಯನ್ನು ತಿನ್ನಿರಿ ಏಕೆಂದರೆ ಸೆಹ್ರಿ ಅನುಗ್ರಹಿಸಲ್ಪಟ್ಟಿದೆ.

### ತಪ್ಪಿ ತಿಂದು ಕುಡಿದವನು ತನ್ನ ಉಪವಾಸವನ್ನು ಪೂರ್ಣಗೊಳಿಸಬೇಕು

**(1933)** ಹಝ್ರತ್ ಅಬುಹುರೈರಾ(ರ) ವರದಿ ಮಾಡುತ್ತಾರೆ ಪ್ರವಾದಿ(ಸ) ಹೇಳಿದರು: ಒಬ್ಬ ವ್ಯಕ್ತಿಯು ಉಪವಾಸದಲ್ಲಿ ತಪ್ಪಾಗಿ ತಿಂದರೆ ಅಥವ ಕುಡಿದರೆ, ಅವನು ತನ್ನ ಉಪವಾಸವನ್ನು ಪೂರ್ಣಗೊಳಿಸಬೇಕು ಏಕೆಂದರೆ ಅಲ್ಲಾಹನು ಅವನಿಗೆ ತಿನ್ನಿಸಿರುವುದು ಮತ್ತು ಕುಡಿಸಿರುವುದು.

### ಪ್ರಯಾಣದಲ್ಲಿ ಉಪವಾಸವು ಪುಣ್ಯವಲ್ಲ

**(1946)** ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) ವರದಿ ಮಾಡುತ್ತಾರೆ ಅವರು ಹೇಳಿದರು: ಪ್ರವಾದಿ ಮುಹಮ್ಮದ್(ಸ) ಪ್ರಯಾಣದಲ್ಲಿದ್ದಾಗ ಒಂದು ಜನಜಂಗುಳಿಯನ್ನು ಮತ್ತು ಒಬ್ಬ ವ್ಯಕ್ತಿಯನ್ನು ನೋಡಿದರು. ಅವರು ಹೇಳಿದರು: ಇದು ಏನು? ಅದಕ್ಕೆ ಜನರು ಹೇಳಿದರು: ಓರ್ವ ಉಪವಾಸಿಗನಾಗಿದ್ದಾನೆ ಅದಕ್ಕೆ ಅವರು ಹೇಳಿದರು: ಪ್ರಯಾಣ ಮಾಡುವಾಗ ಉಪವಾಸದಿಂದ ಯಾವುದೇ ಪ್ರಯೋಜನವಿಲ್ಲ.

**(ಸಹೀಹ್ ಬುಖಾರಿ, ಸಂಪುಟ 3, ಕಿತಾಬುಸ್ಸೌಮ್, 2008 ಖಾದಿಯಾನ್‌ನಲ್ಲಿ ಪ್ರಕಟಿತ)**

## ಅಲ್ಲಾಹನ ಸನ್ನಿಧಿಯಲ್ಲಿ ಆತನ ಭಯದಿಂದ ಅಳುವುದು ನರಕವನ್ನು ನಿಷೇಧಿಸುತ್ತದೆ ಸರ್ವಶಕ್ತ ಅಲ್ಲಾಹನ ದೃಷ್ಟಿಯಲ್ಲಿ ಪ್ರಾಮಾಣಿಕತೆ ಮತ್ತು ಸದಾಚಾರವು ಮೌಲ್ಯಯುತವಾಗಿದೆ ಎಂಬುದನ್ನು ನಿಮ್ಮ ಮನಸ್ಸಿನಲ್ಲಿ ಎಂದಿಗೂ ಮರೆಯಬೇಡಿ

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

### ಒಂದು ಹನಿ ಕಣ್ಣೀರು ಕೂಡ ನರಕವನ್ನು ನಿಷೇಧಿಸುತ್ತದೆ

ಸರ್ವಶಕ್ತನಾದ ಅಲ್ಲಾಹನ ಮಹಿಮೆ ಮತ್ತು ಸರ್ವಶಕ್ತಿ ಹಾಗೂ ಅವನ ಭಯವು ಹೃದಯದ ಮೇಲೆ ಮೇಲುಗೈ ಸಾಧಿಸಿದರೆ ಮತ್ತು ಅಲ್ಲಾಹನ ಸಲುವಾಗಿ ಅನುಕಂಪದಿಂದ ಹಾಗೂ ಮೃದುತ್ವ ಹುಟ್ಟಿ ಒಂದು ಹನಿಯಾದರು ಕಣ್ಣೀರು ಹೊರಬಂದರೆ, ಅವನು ಖಂಡಿತವಾಗಿಯೂ ನರಕವನ್ನು ನಿಷೇಧಿಸುತ್ತಾನೆ. ಹಾಗಾಗಿ ಮನುಷ್ಯನು ತಾನು ತುಂಬಾ ಅಳುತ್ತೇನೆ ಎಂದು ಮೂರ್ಖರಾಗಬಾರದು. ಕಣ್ಣು ಹುಣ್ಣಾಗುವುದು ಮತ್ತು ಕಣ್ಣಿನ ಕಾಯಿಲೆಗಳು ಬರುವುದು ಇದರ ಪ್ರಯೋಜನವೇ ಹೊರತು ಬೇರೇನೂ ಅಲ್ಲ.

ನಾನು ನಿಮಗೆ ಸಲಹೆ ನೀಡುವುದೇನೆಂದರೆ ಅಲ್ಲಾಹನ ಭಯದಿಂದ ಅಲ್ಲಾಹನ ಸಮ್ಮುಖದಲ್ಲಿ ಅಳುವುದು ನರಕವನ್ನು ನಿಷೇಧಿಸುತ್ತದೆ, ಆದರೆ ಅಲ್ಲಾಹನನ್ನು ಅಲ್ಲಾಹ್ ಮತ್ತು ಅವನ ಸಂದೇಶವಾಹಕನನ್ನು ಸಂದೇಶವಾಹಕ ಮತ್ತು ಅವನ ನಿಜವಾದ ಪುಸ್ತಕದ ಬಗ್ಗೆ ಮಾಹಿತಿ ಮಾತ್ರವಲ್ಲದೆ ನಂಬಿಕೆಯೂ ಇರಿಸಬೇಕು. ಓರ್ವ ವೈದ್ಯನು ರೋಗಿಗೆ ಭೇದಿಗೆ ಮದ್ದು ಕೊಡುತ್ತಾನೆ. ಆತನಿಗೆ ಹಗುರ ಹಗುರವಾಗಿ ಬೇದಿಗಳಾಗುತ್ತವೆ ಅವು ಯಕೃತ್ತು ಮುಟ್ಟುವವರೆಗೂ ರೋಗದಿಂದ ಮುಕ್ತಿ ಸಿಗುವುದಿಲ್ಲ. ಅದು ತಮ್ಮೊಂದಿಗೆ ಎಲ್ಲಾ ರದ್ದಿ, ಕಸವನ್ನು ತೆಗೆದು ಹೊರಬರುತ್ತದೆ ಮತ್ತು ರೋಗಿಯನ್ನು ದುರ್ಬಲ ಮತ್ತು ಆತಂಕಕ್ಕೆ ಒಳಪಡಿಸಿದ ಎಲ್ಲಾ ರೀತಿಯ ಸೋಂಕುಗಳು ಮತ್ತು ವಿಷಗಳನ್ನು ತಮ್ಮೊಂದಿಗೆ ಹೊರಬಂದ ನಂತರ ಅವನನ್ನು ಗುಣಪಡಿಸುತ್ತದೆ. ಅದೇ ರೀತಿಯಲ್ಲಿ, ಯಕೃತ್ತು ಅಲ್ಲಾಹನ ಆಸ್ತಾನದಲ್ಲಿ ರೋದಿಸಿದರೆ, ಎಲ್ಲಾ ರೀತಿಯ ಆಂತರಿಕ ಕೊಳಕನ್ನು ಹೊತ್ತುಕೊಂಡು ಅದನ್ನು ಶುದ್ಧೀಕರಿಸುತ್ತದೆ. ಪಶ್ಚಾತ್ತಾಪದ ಸಮಯದಲ್ಲಿ ಹೊರಬರುವ ದೈವಭಕ್ತರ ಕಣ್ಣೀರು ಕಾಮದಲ್ಲಿರುವ ಮನುಷ್ಯ, ಬುಟಾಟಿಕೆ ಮಾಡುವವ ಹಾಗೂ ಹಿಂಸಾಚಾರದಲ್ಲಿ ತೊಡಗಿರುವವರಿಗಿಂತ ಉತ್ತಮ ಮತ್ತು ಉನ್ನತವಾಗಿದೆ, ಏಕೆಂದರೆ ಅದು ಅಲ್ಲಾಹನಿಗಾಗಿದೆ ಮತ್ತು ಇದು ಸೃಷ್ಟಿಗಾಗಿ ಅಥವಾ ತನ್ನ ಸ್ವಾರ್ಥಕ್ಕಾಗಿದೆ.

ಸರ್ವಶಕ್ತ ಅಲ್ಲಾಹನ ದೃಷ್ಟಿಯಲ್ಲಿ ಪ್ರಾಮಾಣಿಕತೆ ಮತ್ತು ಸದಾಚಾರವು ಮೌಲ್ಯಯುತವಾಗಿದೆ ಎಂಬುದನ್ನು ನಿಮ್ಮ ಹೃದಯದಲ್ಲಿ ಎಂದಿಗೂ ಮರೆಯಬೇಡಿ. ತೊಂದರೆಗಳು ಮತ್ತು ತೋರಿಕೆಯು ಅವನ ಸನ್ನಿಧಿಯಲ್ಲಿ ಏನನ್ನೂ ಸಾಧಿಸಲು ಸಾಧ್ಯವಿಲ್ಲ.

**(ಮಲ್‌ಫೂಝಾತ್ ಸಂಪುಟ-1, ಪುಟ-371, 2018 ಖಾದಿಯಾನ್)**

## ಉಪವಾಸದ ಆಧ್ಯಾತ್ಮಿಕ ಪ್ರಯೋಜನವೆಂದರೆ ಮನುಷ್ಯನು ದೇವರೊಂದಿಗೆ ಉನ್ನತ ಮಟ್ಟದ ಸಂಪರ್ಕವನ್ನು ಪಡೆಯುತ್ತಾನೆ ಮತ್ತು ದೇವರೆ ಅವನ ರಕ್ಷಕನಾಗುತ್ತಾನೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಉಪವಾಸದ ಒಂದು ಆಧ್ಯಾತ್ಮಿಕ ಪ್ರಯೋಜನವೆಂದರೆ ಅದು ಸರ್ವಶಕ್ತನಾದ ಅಲ್ಲಾಹನನ್ನು ಅನುಕರಿಸುವಂತೆ ಮಾಡುತ್ತದೆ. ಸರ್ವಶಕ್ತನಾದ ಅಲ್ಲಾಹನ ಒಂದು ಗುಣವೆಂದರೆ ಅವನು ನಿದ್ರೆಯಿಂದ ಮುಕ್ತನಾಗಿದ್ದಾನೆ. ಮನುಷ್ಯನು ತನ್ನ ನಿದ್ರೆಯನ್ನು ಸಂಪೂರ್ಣವಾಗಿ ತ್ಯಜಿಸುವ ಮೂಲಕ ಇದನ್ನು ಮಾಡಲು ಸಾಧ್ಯವಿಲ್ಲ, ಆದರೆ ಉಪವಾಸದಲ್ಲಿ ಸರ್ವಶಕ್ತನಾದ ಅಲ್ಲಾಹನ ಸಲುವಾಗಿ ಅವನು ತನ್ನ ನಿದ್ರೆಯ ಒಂದು ಭಾಗವನ್ನು ಅವಶ್ಯವಾಗಿ ತ್ಯಾಗ ಮಾಡುತ್ತಾನೆ ಸೆಹ್ರಿ ಮಾಡಲು ನಿದ್ರೆಯಿಂದ ಬೇಗನೆ ಎದ್ದು ತಹಜ್ಜುದ್ ನಮಾಝನ್ನು ನಿರ್ವಹಿಸುತ್ತಾನೆ. ಉಪವಾಸ ಮಾಡದ ಮಹಿಳೆಯರು ಸೆಹ್ರಿ ವ್ಯವಸ್ಥೆ ಮಾಡಲು ಏಳುತ್ತಾರೆ. ಸ್ವಲ್ಪ ಸಮಯವನ್ನು ದುಆದಲ್ಲಿ ಮತ್ತು ಸ್ವಲ್ಪ ಸಮಯ ನಮಾಝ್ ನಿರ್ವಹಿಸುವುದರಲ್ಲಿ ಕಳೆಯುತ್ತಾರೆ ಹೀಗೆ ರಾತ್ರಿಯ ಕಡಿಮೆ ಭಾಗ ನಿದ್ರೆಗೆ ಉಳಿಯುತ್ತದೆ. ಮತ್ತು ಕೆಲಸ ಮಾಡುವವರಿಗೆ ಬೇಸಿಗೆಗಾಲದಲ್ಲಿ ನಿದ್ರೆಗೆ ಕೇವಲ ಎರಡು ಅಥವಾ ಮೂರು ಗಂಟೆಗಳು ಮಾತ್ರ ದೊರೆಯುತ್ತವೆ. ಈ ರೀತಿಯಾಗಿ ಮನುಷ್ಯ ಮತ್ತು ಅಲ್ಲಾಹನ ನಡುವೆ

*(ಪುಟ ಸಂಖ್ಯೆ-10 ರಲ್ಲಿ ಮುಂದುವರಿಸಲಾಗಿದೆ)*

## ದಿವ್ಯದೂತರು (ಮಲಾಯಿಕ)

ಒಬ್ಬ ಮಹತ್ವಶಾಲಿ ವ್ಯಕ್ತಿ ದೇವನ ಪ್ರಾತಿನಿಧ್ಯದ ಉಡುಗೆಯಿಂದ ಭೂಷಿತರಾಗಿ (ದೇವನ ಖಲೀಫ಼ರಾಗಿ) ಮತ್ತು ದೇವವಾಣಿಯಿಂದ ಅನುಗ್ರಹೀತರಾಗಿ ಭೂಮಿಗೆ ಇಳಿಯುವಾಗ ದಿವ್ಯದೂತರ ಮತ್ತು ಪವಿತ್ರಾತ್ಮದ ಅವತರಣ ಅಥವಾ ಭೂಮಿಗೆ ಇಳಿಯುವಿಕೆ ಉಂಟಾಗುತ್ತದೆ.ಪವಿತ್ರಾತ್ಮ ವಿಶಿಷ್ಟವಾಗಿ ದೇವನ ಪ್ರತಿನಿಧಿಗೆ ಲಭಿಸುತ್ತದೆ."

*(ಫತ್‌ಹೆ ಇಸ್ಲಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 12)*

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِي الْعَالَمِ ۞ شَرُّ السُّمُوْمِ عَدَاوَةُ الصُّلَحَاءِ

**ಪೀರ್ ಮಹರ್ ಅಲಿ ಶಾಹ್ ಗೊಲಡ್ವಿ ಅವರಿಗಾಗಿ ಮತ್ತೊಂದು ವೈಭವಯುತ ಬಹುಮಾನದ ಪಂಥಾಹ್ವಾನ ಪ್ರತಿರೂಪವಾಗಿ ವ್ಯಾಖ್ಯಾನ ಬರೆದ ಮೇಲೆ, ಆ ವ್ಯಾಖ್ಯಾನ ಅರ್ಥವತ್ತಾಗಿ ಹಾಗೂ ವಿಷಯಾಧಾರಿತವಾಗಿ ಇದ್ದರೆ, ಹಾಗೂ ನೀವು ನನ್ನ ವ್ಯಾಖ್ಯಾನದಿಂದ ತಪ್ಪುಗಳನ್ನು ಹುಡುಕಿ ತೋರಿಸಿದರೆ ಪ್ರತಿಯೊಂದು ತಪ್ಪಿಗೆ ಐದು ರೂಪಾಯಿ ಬಹುಮಾನ ನೀಡುವೆನು.**

ಸಯ್ಯದ್‌ನಾ ಹಜ್‌ರತ್ ಮಸೀಹ್ ಮೌಊದ್(ಅ) ರವರ ಈ ವೈಭವಯುತ ಬಹುಮಾನದ ಪಂಥಾಹ್ವಾನ ನಾವು ಅವರ ಗ್ರಂಥ **"ನುಝೂಲುಲ್ ಮಸೀಹ್"** ರೂಹಾನಿ ಖಝಾಯಿನ್, ಸಂಪುಟ 8 ರಿಂದ ಪ್ರಸ್ತುತಪಡಿಸುತ್ತಿದ್ದೇವೆ. ನಾವು ಈ ಮೊದಲು ಹೇಳಿದಂತೆ ಎಪ್ಪತ್ತು ದಿನಗಳ ಒಳಗೆ ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಅರಬಿಯಲ್ಲಿ ಸೂರಃ ಫಾತಿಹದ ವ್ಯಾಖ್ಯಾನ **"ಇಜಾಝುಲ್ ಮಸೀಹ್"** ಹೆಸರಿನಲ್ಲಿ ಅರ್ಥಗರ್ಭಿತ ಹಾಗೂ ತತ್ವಪೂರ್ಣವಾಗಿ ಬರೆದು ಪ್ರಕಟಿಸಿರುವರು. ಆದರೆ ಪೀರ್ ಮಹರ್ ಶಾಹ್ ಗೊಳಳವಿ ಅವರು ಯಾವ ವ್ಯಾಖ್ಯಾನವನ್ನು ಬರೆದು ಕಳುಹಿಸಲಿಲ್ಲ. ಆದರೆ ಒಂದೂವರೆ ವರ್ಷ ನಂತರ ಅವರು ಒಂದು ಗ್ರಂಥ **"ಸೈಫ್ ಚಿಶ್ತಿಯಾಮಿ"** ಹೆಸರಿನಿಂದ ಉರ್ದುವಿನಲ್ಲಿ ಬರೆದು ಕಳುಹಿಸಿದ್ದರು. ಅದರಲ್ಲಿ ವ್ಯಾಖ್ಯಾನದ ವಿಷಯವೇ ಇರಲಿಲ್ಲ. ಕೇವಲ ನಿರರ್ಥಕ ಆರೋಪಗಳು ಮಾತ್ರ ಇದ್ದವು. ಈ ಸಂಬಂಧ ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ರವರ ಉತ್ತರ ಹಿಂದಿನ ಸಂಚಿಕೆಯಲ್ಲಿ ನಾವು ಪ್ರಸ್ತುತಪಡಿಸಿದ್ದೆವು. ಅವರ ಇನ್ನಷ್ಟು ಉತ್ತರಗಳು ಮತ್ತು ವೈಭವಯುತ ಅಧ್ಯಾಪನೆಗಳು ಹಾಗೂ ಅವರ ಬಹುಮಾನದ ಪಂಥಾಹ್ವಾನ ನಾವು ಪ್ರಸ್ತುತಪಡಿಸುವೆವು.

**ತಫ್ಸೀರ್‌ನ (ವ್ಯಾಖ್ಯಾನದಲ್ಲಿ) ದಲ್ಲಿ ತಪ್ಪು ಹುಡುಕಿ ಕೊಟ್ಟಲ್ಲಿ ಒಂದು ತಪ್ಪಿಗೆ ಐದು ರೂಪಾಯಿ ಬಹುಮಾನದ ಪಂಥಾಹ್ವಾನ.**

ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ನಾವು ಎಷ್ಟೋ ಸಲ ಈ ಜಾಹೀರಾತು ಸಹ ನೀಡಿದ್ದೆವು. ನಮ್ಮ ಎದುರಾಗಿ ಯಾವುದೆ ಅರಬಿ ಪತ್ರಿಕೆ(ನಿಯತಕಾಲಿಕ) ಬರೆಯಿರಿ, ಮತ್ತು ಅರಬಿ ಭಾಷೆಯ ತಜ್ಞರು ಅದರ ತೀರ್ಪುಗಾರರಾಗಲಿ, ನಿಮ್ಮ ಪತ್ರಿಕೆ(ನಿಯತಕಾಲಿಕ) ಅರ್ಥಗರ್ಭಿತವಾಗಿಯೂ ಮತ್ತು ತತ್ವಾಧಾರಿತವಾಗಿದ್ದರೆ ನನ್ನ ಸಂಪೂರ್ಣ ದಾವೆಯು ಸುಳ್ಳಾಗುವುದು. ಮತ್ತು ನಾನು ಈಗಲೂ ಸಹ ಒಪ್ಪಿಕೊಳ್ಳುವುದೇನೆಂದರೆ ನೀವು ಬರೆದಿರುವ ತಫ್ಸೀರ್ ನಲ್ಲಿ ಯಾವುದೇ ರೀತಿಯ ತಪ್ಪುಗಳು ಇಲ್ಲ ಎಂದು ಸ್ಪಷ್ಟವಾದಾಗ ನೀವು ನನ್ನ ತಫ್ಸೀರ್ ವ್ಯಾಖ್ಯಾನದಿಂದ ತಪ್ಪುಗಳನ್ನು ಹುಡುಕಿಕೊಟ್ಟರೆ ಒಂದು ತಪ್ಪಿಗೆ ಐದು ರೂಪಾಯಿ ಬಹುಮಾನ ನೀಡುವೆವು. ಆದರಿಂದ ನಿಷ್ಪ್ರಯೋಜಕ ಆಕ್ಷೇಪ ಎತ್ತುವ ಬದಲು ಅರಬಿಯಲ್ಲಿ ವ್ಯಾಖ್ಯಾನ ಬರೆದು ತನ್ನ ಪ್ರೌಢತೆ ಸಾಬೀತು ಮಾಡಬೇಕು. ಏಕೆಂದರೆ ಯಾವ ವಿಷಯದಲ್ಲಿ ಒಬ್ಬನು ಪರಿಪೂರ್ಣತೆ ಸಾಧಿಸಲಿಲ್ಲ ಎಂದಾದರೆ ಅವನಿಗೆ ಆ ವಿಷಯದಲ್ಲಿ ಆಕ್ಷೇಪ ಎತ್ತಲು ಹಕ್ಕಿರುವುದಿಲ್ಲ. ಒಬ್ಬ ಶಿಲ್ಪಿಯು ಶಿಲ್ಪಕಲೆಯ ಮೇಲೆ ಆಕ್ಷೇಪ ಎತ್ತಬಹುದು. ಒಬ್ಬ ಕುಲುಮೆಗಾರ ಕುಲುಮೆಗಾರರನ್ನು ಆಕ್ಷೇಪಿಸಬಹುದು. ಆದರೆ ಒಬ್ಬ ಸಿಪಾಯಿ ಕರ್ಮಚಾರಿಗೆ ಜಾಣ ಮೇಸ್ತ್ರಿಯ ಮೇಲೆ ಆಕ್ಷೇಪ ಮಾಡಲು ಹಕ್ಕಿರುವುದಿಲ್ಲ. (ನುಝೂಲುಲ್ ಮಸೀಹ್, ರೂಹಾನಿ ಖಝಾಈನ್, ಸಂಪುಟ–18, ಪುಟ–400)

**ಅರಬಿ ಬರೆಯಲಾಗದವನು ಅರಬಿಯ ತಪ್ಪುಗಳನ್ನು ಹೆಕ್ಕಿ ತೋರಿಸಲು ಹಕ್ಕುದಾರನಾಗಬಹುದೇ?**

ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಿಮಗೆ ಸ್ವಂತವಾಗಿ ಒಂದು ಸಾಲು ಸಹ ಅರಬಿ ಬರೆಯುವ ಅರ್ಹತೆ ಇಲ್ಲ ಎಂದ ಮೇಲೆ, ಸೈಫ್ ಚಿಶ್ತಿಯಾಯಿನಲ್ಲಿ ಸಹ ನೀವು ಕದ್ದ ಮಾಲನ್ನು ತನ್ನ ಮಾಲು ಎಂದ ಹಾಗಾಯಿತು. ಹೀಗಿರುವಾಗ ಏಕೆ ನಿಮಗೆ ನಾಚಿಕೆಯಾಗುವುದಿಲ್ಲ. ಓ ಭಲೆ ಮನುಷ್ಯ ಮೊದಲು ತಮ್ಮ ಅರಬಿ ಪಾಂಡಿತ್ಯ ಆದರೂ ಸಾಬೀತು ಮಾಡಿ ತೋರಿಸಿರಿ. ನಂತರ ನನ್ನ ಗ್ರಂಥದಿಂದ ತಪ್ಪು ಹುಡುಕಿ ತೋರಿಸಿರಿ. ಆಗ ಒಂದೊಂದು ತಪ್ಪಿಗೆ ಒಂದೊಂದು ರೂಪಾಯಿ ನಮ್ಮಿಂದ ಪಡೆಯಿರಿ. ನನ್ನ ಎದುರಾಗಿ ಅರಬಿಯಲ್ಲಿ ಪತ್ರಿಕೆ ಬರೆದು ನನ್ನ ಗ್ರಂಥದ ಪವಾಡವನ್ನು ಸುಳ್ಳಾಗಿಸಿ ತೋರಿಸಿರಿ. ಅಕಟಾಕಟ! ಹತ್ತು ವರ್ಷಗಳ ಅವಧಿ ಕಲೆಯಿತು. ಯಾರೂ ಸಹ ಸಜ್ಜನಿಕೆಯ ರೀತಿಯಲ್ಲಿ ನನ್ನನ್ನು ಎದುರಿಸಲಿಲ್ಲ. ಹಾಗೆ ಮಾಡಿದ್ದೆನಾದರೂ ಇದ್ದರೆ ಕೇವಲ ನಿಮ್ಮ ಗ್ರಂಥದಲ್ಲಿ ಅದು ತಪ್ಪಾಗಿದೆ, ಇದು ತಪ್ಪಾಗಿದೆ ಅನ್ನುವುದು ಹಾಗೂ ಆ ವಾಕ್ಯ, ಈ ವಾಕ್ಯ ಕದ್ದು ಬರೆಯಲಾಗಿದೆ ಎನ್ನುವುದು ಎಷ್ಟು ಸರಿ? ಅವರಿಂದ ಸಾಧ್ಯವಾದರೆ ಎದುರು ಏಕೆ ಬರುವುದಿಲ್ಲ? ನರಿಯ ಹಾಗೆ ಏಕೆ ಓಡಿ ಹೋಗುತ್ತಾನೆ? ಓ ಮೂಢನೆ ಮೊದಲು ಯಾವುದೇ ವ್ಯಾಖ್ಯಾವಾದರೂ ಅರಬಿಯಲ್ಲಿ ಬರೆದು ತನ್ನ ಅರಬಿ ಪಾಂಡಿತ್ಯವನ್ನು ಸಾಬೀತು ಮಾಡು. ಆಗ ನಿನಗೆ ಆಕ್ಷೇಪ ಎತ್ತುವುದು ಹಕ್ಕು ಸಿಗಬಹುದು. ಸಾಕ್ಷ್ಯಗಳಿಲ್ಲದೆ ಅರಬಿ ಶಿಕ್ಷಣದ ಬಗ್ಗೆ ನನ್ನನ್ನು ಎತ್ತಿ ತೋರಿಸುವುದು, ಕೃತಿ ಚೌರ್ಯದ ಆರೋಪ ಹಚ್ಚುವುದು, ವ್ಯಾಕರಣದ ತಪ್ಪು ತಿಳಿಸುವುದು, ಇವೆಲ್ಲ ಕೇವಲ ಎಂಜಲು ತಿನ್ನುವ ಮಾತಾಗಿದೆ. ಓ ಅಜ್ಞಾನಿಯೇ, ಲಜ್ಜೆಗೇಡಿಯೇ ಮೊದಲು ಅರಬಿಯಲ್ಲಿ ಅರ್ಥಗರ್ಭಿತ ಹಾಗೂ ತಫ್ಸೀರ್ ಆಧಾರವಾಗಿ ಯಾವುದೇ ಸೂರಃ (ಅಧ್ಯಾಯ)ದ ವ್ಯಾಖ್ಯಾನ ಬರೆದು ಪ್ರಕಟಿಸು. ಆಗ ನಿನಗೆ ಬೆರೊಬ್ಬರ ಹತ್ತಿರ ನನ್ನ ಗ್ರಂಥದಿಂದ ತಪ್ಪು ಹುಡುಕುವ, ಕೃತಿಚೌರ್ಯದ ಆರೋಪ ಹಚ್ಚಲು ನಿನಗೆ ಹಕ್ಕು ಇರುತ್ತದೆ. ಯಾವ ವ್ಯಕ್ತಿ ಸಾವಿರಾರು ಭಾಗಗಳನ್ನು ಅರಬಿಯಲ್ಲಿ ಬರೆದು ತೋರಿಸಿರುವನೇ ಹೊರತು ಕೇವಲ ಭೂಟಾಟಿಕೆ ಮಾಡಲಿಲ್ಲ, ಬದಲು ಸತ್ಯವಾದ ಸಾಕ್ಷ್ಯಗಳನ್ನು ವಿವರಿಸಿರುವನು. ಕೇವಲ ಅವನನ್ನು ನಿರಾಕರಿಸುವುದು ಅವನಿಗೆ ಉತ್ತರವಾಗಬಹುದೇ ಅಥವಾ ಎಲ್ಲಿಯವರೆಗೆ ಕಾರ್ಯದ ಎದುರು ಕಾರ್ಯ ಮಾಡಿ ತೋರಿಸುವುದಿಲ್ಲ, ಕೇವಲ ಭೂಟಾಟಿಕೆಯಿಂದ ನ್ಯಾಯ ತೀರ್ಪು ಕಾರಣವಾಗಲು ಸಾಧ್ಯವೇ. ಅದರಿಂದ ಯಾವ ಅರ್ಹತೆ ಸಾಬೀತಾಗಲು ಸಾಧ್ಯ? ಕೇವಲ ನಾಲಿಗೆಯಿಂದ ಅದು ತಪ್ಪು, ಇದು ತಪ್ಪು, ಆ ವಾಕ್ಯಗಳನ್ನು ಕದ್ದು ಬರೆಯಲಾಗಿದೆ ಎನ್ನುವುದರಿಂದ ಏನು ಪ್ರಯೋಜನ? ಅದರಿಂದ ನಿಮ್ಮ ಯಾವ ಮಹಾನತೆ ಸಾಬೀತಾದಂತಾಯಿತು? ತಮ್ಮ ಮಹಾನತೆ ಸಾಬೀತು ಮಾಡಿ ತೋರಿಸದಿದ್ದರೆ ನಿಮ್ಮ ಆಕ್ಷೇಪಗಳನ್ನು ಹೇಗೆ ಸರಿಯಾಗುವುದು? ಬದಲು ಯಾವ ವ್ಯಕ್ತಿ ಅಂತಹ ಅರ್ಹತೆಯುಳ್ಳ ಮತ್ತು ಪರಿಪೂರ್ಣ ಮನುಷ್ಯರ ಮೇಲೆ ಆಕ್ಷೇಪ ಮಾಡುವನೋ, ಯಾವ ಜನರು ತನ್ನ ಯಾವ ಮಹಾನತೆ ನಮೂನೆಯನ್ನು ತೋರಿಸಲಾರರು, ಅದಕ್ಕಿಂತ ಹುಚ್ಚುತನ ಬೇರೊಂದಿಲ್ಲ. (ಅದೇ ಪುಟ 441).

**ವಾಗ್ದತ್ತ ಮಸೀಹರಿಗೆ ತತ್ವಾಧಾರಿತ ಬರಹದ ಪವಾಡವನ್ನು ಉಕ್ಕುವ ಸಮುದ್ರ ರೀತಿಯಲ್ಲಿ ನೀಡಲಾಗಿದೆ. ಅಂತಹ ವ್ಯಕ್ತಿಯೊಬ್ಬನ ಮೇಲೆ ಆಕ್ಷೇಪ ಮಾಡುವವನು ಓರ್ವ ಶಾಪಗ್ರಸ್ತ ಕ್ರಿಮಿ ಹೊರತು ಮನುಷ್ಯನಲ್ಲ. ಏಕೆಂದರೆ ಸ್ವಯಂ ನಿಷ್ಪ್ರಯೋಜಕನಾಗಿ, ಅಂತಹ ವ್ಯಕ್ತಿಯೊಬ್ಬನ ಮೇಲೆ ಆರೋಪ ಮಾಡುತ್ತಿದ್ದಾನೆ.**

ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಮನುಷ್ಯನು ಲೇಖನಿ ಸರದಾರನಾದರೆ ಅವನ ಜ್ಞಾನ ಮತ್ತು ಜಾಣ್ಮೆ ಹಲವು ರೀತಿಯಲ್ಲಿ ಸಾಹಿತ್ಯಕ ಶೃಂಗಾರದಿಂದ ಬರಹ ಮತ್ತು ಅರ್ಥಗರ್ಭಿತ ಹಾಗೂ ತತ್ವಪೂರ್ಣ ಉದಾಹರಣೆಗಳನ್ನು ನೀಡುವುದಾದರೆ ಮತ್ತು ಅವನಿಗೆ ಅಲ್ಲಾಹನ ಸಾನಿಧ್ಯದಲ್ಲಿ ಗದ್ಯ ಹಾಗೂ ಪದ್ಯ ಬರೆಯುವುದರಲ್ಲಿ ಪ್ರಾವೀಣ್ಯತೆ ಪಡೆಯುವಂತಾದರೆ ಮತ್ತು ಯಾವುದೆ ಕುಂದುಕೊರತೆ ಬಾಕಿ ಉಳಿಯದಿದ್ದರೆ ಅಂತಹ ಪರಿಪೂರ್ಣತೆ ಮತ್ತು ಮಹಾನತೆ ಸ್ಥಿತಿಯಲ್ಲಿ ಅವನ ಬರಹದಲ್ಲಿ ಸಮಯೋಚಿತವಾಗಿ ಸಂಧರ್ಭಾನುಸಾರ ಕೆಲ ಖುರ್‌ಆನ್‌ನ ವಚನಗಳು ಸೇರಿದರೆ ಅಥವಾ ಪೂರ್ವ ಮಹಾತ್ಮರುಗಳ ಕೆಲ ನುಡಿ ಮುತ್ತುಗಳು ಮತ್ತು ಉದಾಹರಣೆಗಳು ಬಂದರೆ ಅದು ಆಕ್ಷೇಪಾರ್ಹ ಆಗುವುದಿಲ್ಲ. ಏಕೆಂದರೆ ಅದು ಅವನ ಭಾಷಾ ಪಾಂಡಿತ್ಯದ ಒಂದು ಒಪ್ಪತಕ್ಕ ವಿಷಯವಾಗಿರುತ್ತದೆ. ಅದು ನದಿಯ ರೀತಿ ಹರಿಯುತ್ತಾ ಮತ್ತು ವಾಯುವಿನಂತೆ ನಡೆಯುವ ಕ್ರಿಯೆ ಆಗಿರುತ್ತದೆ. ಸ್ವಯಂ ಏನೂ ತಿಳಿಯದೆ ನಿಷ್ಪ್ರಯೋಜಕನಾಗಿ ಸಾರಗರ್ಭಿತ ತತ್ವಪೂರ್ಣ ಬರಹಗಾರನೊಬ್ಬನ ಮೇಲೆ ಆಕ್ಷೇಪವೆತ್ತುವೆನು. ಒಬ್ಬ ಶಾಪಗ್ರಸ್ತ ಕ್ರಿಮಿ ಆಗಬಹುದೆ ಹೊರತು ಮನುಷ್ಯನಲ್ಲ. ಏಕೆಂದರೆ ಅವನು ಹಲವು ಅರಬಿ ಗ್ರಂಥಗಳನ್ನು ಅರ್ಥಗರ್ಭಿತ, ತತ್ವಾಧಾರಿತ ರೀತಿಯಲ್ಲಿ ಬರೆದು ತನ್ನ ಪವಾಡ ಪ್ರದರ್ಶಿಸಿದ ಒಬ್ಬನ ಮೇಲೆ ಆಕ್ಷೇಪ ಮಾಡುವುದೆಂದರೆ ಅದು ಅರ್ಥಹೀನ. ಅವನಿಗೆ ತತ್ವಾಧಾರಿತ ಬರಹಗಳ

*(ಪುಟ 08 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ವೈಭವಶಾಲಿಯಾದ ಅಲ್ಲಾಹನು ತನ್ನ ಸೃಷ್ಟಿಗಳಿಗಾಗಿ ತೆರೆದಿರುವ ಬಾಗಿಲು ಒಂದೇ ಆಗಿದೆ. ಅದು ದುಆದ ಬಾಗಿಲಾಗಿದೆ. ಒಬ್ಬ ವ್ಯಕ್ತಿ ಅಳಲು ಮತ್ತು ರೋದನದಿಂದ ಈ ಬಾಗಿಲಿನ ಮೂಲಕ ಪ್ರವೇಶಿಸುವಾಗ ಕೃಪಾಳುವಾದ ಅಲ್ಲಾಹನು ಅವನಿಗೆ ಪರಿಶುದ್ಧತೆ ಮತ್ತು ನಿರ್ಮಲತೆಯ ಹೊದಿಕೆಯನ್ನು ಹೊದಿಸುತ್ತಾನೆ ಮತ್ತು ತನ್ನ ವೈಭವವನ್ನು ಅವನ ಮನಸ್ಸಲ್ಲಿ ಎಷ್ಟರ ಮಟ್ಟಿಗೆ ಇರಿಸುತ್ತಾನೆ ಎಂದರೆ, ಮನುಷ್ಯನು ವ್ಯರ್ಥವಾದ ಕೆಲಸಗಳಿಂದಲೂ ಮತ್ತು ಅನಾವಶ್ಯಕವಾದ ಚಲನವಲನಗಳಿಂದಲೂ ಬಲುದೂರವಾಗುತ್ತಾನೆ. (ಹಝ್ರತ್ ಮಸೀಹ್ ಮೌಊದ್(ಅ))**

**ಪವಿತ್ರ ಮಾಸ ರಮಝಾನ್‌ನಲ್ಲಿ ದುಆದ ಪ್ರಾಮುಖ್ಯತೆ ಮತ್ತು ದುಆವನ್ನು ಸ್ವೀಕರಿಸಲು ಕಾರಣಗಳು ಮತ್ತು ಷರತ್ತುಗಳನ್ನು ವಿವರಾತ್ಮಕ ಪ್ರಸ್ತಾವನೆ**

**ತಮ್ಮ ಜೀವಿತಗಳನ್ನು ಈ ರೀತಿಯಾಗಿ ಮಾಡುವವರೇ ನೈಜ ಸನ್ಮಾರ್ಗವನ್ನು ಪಡೆಯುವವರಾಗಿರುತ್ತಾರೆ. ಈ ರಮಝಾನನ್ನು ಸದಾ ತನ್ನ ದುಆ ಸ್ವೀಕಾರದ ಮಾರ್ಗವನ್ನಾಗಿ ಮಾಡುವವರು, ಅಲ್ಲಾಹನ ನೈಜ ದಾಸನಾಗುವವರು, ಅಲ್ಲಾಹನ ಆದೇಶಗಳನ್ನು ಅನುಸರಿಸುವವರು ಮತ್ತು ತಮ್ಮ ವಿಶ್ವಾಸವನ್ನು ಪರಿಪೂರ್ಣಗೊಳಿಸುವವರು ಸೌಭಾಗ್ಯಶಾಲಿಗಳಾಗಿರುವರು.**

**ಪವಿತ್ರ ಖುರ್‌ಆನ್‌ನ ಆಯತ್ "ವಲ್ಲಝೀನ ಜಾಹದೂ ಫೀನಾ ಲನಹ್ದಿಯನ್ನಹುಮ್ ಸುಬುಲನಾ"ದ ದುಆಗಳ ಸ್ವೀಕಾರದೊಂದಿಗೆ ಸೂಕ್ಷ್ಮ ಸಂಬಂಧ**

**ಲೊಕದ ಪರಿಸ್ಥಿತಿಯ ದೃಷ್ಟಿಯಿಂದ, "ಅಲ್ಲಾಹನು ಜಗತ್ತನ್ನು ವಿನಾಶದಿಂದ ರಕ್ಷಿಸಲಿ ಮತ್ತು ಅವುಗಳನ್ನು ಸೃಷ್ಟಿಸಿದ ಅಲ್ಲಾಹನನ್ನು ಗುರುತಿಸಲು ಅವರಿಗೆ ಬುದ್ಧಿವಂತಿಕೆಯನ್ನು ನೀಡಲಿ" ಎಂಬ ದುಆವಿನ ಕೋರಿಕೆ**

**ಬದರಿ ಸಹಾಬರವರ ಕುರಿತು ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಅವರು ನೀಡಿರುವ ಖುತ್‌ಬ ಜುಮುಅಗಳನ್ನು *MTA* ರವರು ಸಿದ್ಧಪಡಿಸಿದ *www.313companions.org* ವೆಬ್‌ಸೈಟ್‌ಗೆ ಚಾಲನೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **08–04–2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ -

اَلْحَمْدُ لِلّٰهِ رَبِّ الْعٰلَمِيْنَ ○ الرَّحْمٰنِ الرَّحِيْمِ ○ مٰلِكِ يَوْمِ الدِّيْنِ ○ إِيَّاكَ نَعْبُدُ وَإِيَّاكَ نَسْتَعِيْنُ ○

اِهْدِنَا الصِّرَاطَ الْمُسْتَقِيْمَ ○ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ○

وَإِذَا سَأَلَكَ عِبَادِيْ عَنِّيْ فَإِنِّيْ قَرِيْبٌ أُجِيْبُ دَعْوَةَ الدَّاعِ إِذَا دَعَانِ فَلْيَسْتَجِيْبُوْا لِيْ وَلْيُؤْمِنُوْا بِيْ لَعَلَّهُمْ يَرْشُدُوْنَ (البقرة:187)

**ವಇಝಾ ಸಅಲಕ ಇಬಾದಿ ಅನ್ನಿ ಫಇನ್ನಿ ಖರೀಬ್ ಉಜೀಬು ದಅವತದ್ದಆಇ ಇಝಾ ದಆನ್ ಫಲ್ ಯಸ್ತಜೀಬುಲೀ ವಲ್‌ಯುಮಿನೂ ಬೀ ಲಅಲ್ಲಹುಮ್ ಯರ್‌ಶುದೂನ್** (ಅಲ್‌ಬಖರ: 187) ಈ ವಚನದ ಅರ್ಥ ಹೀಗಿದೆ: ಎಂದರೆ, ನನ್ನ ಬಗ್ಗೆ ನನ್ನ ದಾಸರು ನಿನ್ನೊಡನೆ ಕೇಳಿದರೆ ಹೇಳು – ಖಂಡಿತವಾಗಿಯೂ ನಾನು ಸಮೀಪದಲ್ಲೇ ಇದ್ದೇನೆ. ನನ್ನನ್ನು ಕರೆದು ಪ್ರಾರ್ಥಿಸುವಾಗ ಪ್ರಾರ್ಥಿಸುವವನ ಪ್ರಾರ್ಥನೆಗೆ ನಾನು ಉತ್ತರ ನೀಡುವೆನು. ಆದ್ದರಿಂದ ಅವರು ಸತ್ಪಥವನ್ನು ಪಡೆಯಲಿಕ್ಕಾಗಿ ನನ್ನ ಕರೆಗೆ ಓಗೊಡಲಿ ಮತ್ತು ನನ್ನ ಮೇಲೆ ನಂಬಿಕೆ ಇರಿಸಲಿ.

ಅಲ್ಲಾಹನ ಅನುಗ್ರಹದಿಂದ ನಾವು ರಮಝಾನ್ ಮಾಸದಿಂದ ದಾಟಿಹೋಗುತ್ತಿದ್ದೇವೆ. ಈ ತಿಂಗಳು ದುಆ ಸ್ವೀಕಾರದ ತಿಂಗಳಾಗಿದೆ. ಅಲ್ಲಾಹನು ಈ ತಿಂಗಳಲ್ಲಿ ವಿಶಿಷ್ಟ ಕೃಪೆಯಿಂದ ದುಆಗಳನ್ನು ಸ್ವೀಕಾರ ಮಾಡುವುದಾಗಿ ಘೋಷಿಸಿದ್ದಾನೆ. ತನ್ನ ಅನುಗ್ರಹದ ಚಿಲುಮೆಯನ್ನು ಇದರಲ್ಲಿ ಜಾರಿಗೊಳಿಸಿರುವನು. ಏಕೆಂದರೆ ಈ ಮಾಸದಲ್ಲಿ ಮನುಷ್ಯನು ತನ್ನ ಪ್ರತಿಯೊಂದು ಕೃತ್ಯವನ್ನು ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ ಮಾಡುತ್ತಾನೆ. ಆಹಾರ ಪಾನೀಯ ಕೂಡ ಅಲ್ಲಾಹನ ಆದೇಶ ಮತ್ತು ಒಂದು ನಿರ್ದಿಷ್ಟ ಸಮಯದಲ್ಲಿ ಮಾಡುತ್ತಾನೆ. ಈ ಮಾಸದಲ್ಲಿ ಸ್ವರ್ಗದ ಬಾಗಿಲುಗಳು ತೆರೆಯಲ್ಪಡುವುವು ಮತ್ತು ನರಕದ ಬಾಗಿಲುಗಳು ಮುಚ್ಚಲ್ಪಡುವುವು ಹಾಗೂ ಶೈತಾನನನ್ನು ಬಿಗಿಯಲಾಗುವುದು ಎಂದು ಅಲ್ಲಾಹನು ತಿಳಿಸಿದ್ದಾಗಿ ಹಝ್ರತ್ ಪೈಗಂಬರ್(ಸ) ಹೇಳಿರುವರು. (ಸಹೀಹ್ ಮುಸ್ಲಿಮ್, ಕಿತಾಬುಸ್ಸೌಮ್, ಹದೀಸ್–2495)

ಒಟ್ಟಿನಲ್ಲಿ ನಾವು ಅಲ್ಲಾಹನ ಸಾಮೀಪ್ಯವನ್ನು ಗಳಿಸಲು ಬೇಕಾದ ಏರ್ಪಾಡನ್ನು ಅಲ್ಲಾಹನು ನಮಗಾಗಿ ಒದಗಿಸಿ ಕೊಡುತ್ತಾನೆ ಎಂಬುದು ನಮ್ಮ ಸೌಭಾಗ್ಯವಾಗಿದೆ. ಇಂತಹ ಸ್ಥಿತಿಗತಿಗಳು ಅಲ್ಲಾಹನ ಕಡೆಯಿಂದ ಒದಗಿ ಬಂದು ಕೂಡ ನಮಗೆ ಅದರಿಂದ ಪ್ರಯೋಜನ ಪಡೆಯಲು ಸಾಧ್ಯವಾಗದಿದ್ದರೆ ಅದು ನಮ್ಮ ದೌರ್ಭಾಗ್ಯವಾಗಿರುವುದು. ಲೋಕದಲ್ಲಿ ರಮಝಾನ್ ತಿಂಗಳಲ್ಲಿ ವ್ಯಭಿಚಾರಿ, ದರೋಡೆಕೋರ, ಕೆಟ್ಟವನು ತನ್ನ ದುಷ್ಕೃತ್ಯಗಳನ್ನು ಮಾಡುವುದಿಲ್ಲವೇ? ಮಾಡುತ್ತಾರೆ ಮತ್ತು ಖಂಡಿತ ಮಾಡುತ್ತಾರೆ. ಪ್ರತಿಯೊಬ್ಬರ ಶೈತಾನ್ ಕಟ್ಟಿ ಹಿಡಿಯಲಾಗಿದ್ದರೆ ಅವರು ಶೈತಾನಿ ಪೈಶಾಚಿಕ ಕೃತ್ಯಗಳನ್ನು ಹೇಗೆ ಮಾಡಲು ಸಾಧ್ಯ? ಇದು ಸತ್ಯವಿಶ್ವಾಸಿಗಳಿಗೂ ಅಲ್ಲಾಹನ ಸಾಮೀಪ್ಯವನ್ನು ಗಳಿಸಲು ಬಯಸುವವರಿಗೂ ಇರುವ ಒಂದು ಉಪದೇಶವಾಗಿದೆ. ಅದೇನೆಂದರೆ, ಅಲ್ಲಾಹನ ಆದೇಶ ಪ್ರಕಾರ ಅನುಮತನೀಯವಾದ ಕೆಲಸದಿಂದಲೂ ತಡೆದು ನಿಲ್ಲುವವರಿಗಾಗಿ ರಮಝಾನ್ ಮಾಸದಲ್ಲಿ ಶೈತಾನನನ್ನು ಕಟ್ಟಿಹಿಡಿಯಲಾಗುತ್ತದೆ. ಸಾಮಾನ್ಯ ಸ್ಥಿತಿಯಲ್ಲಿ ಶೈತಾನನು ಪೂರ್ಣವಾಗಿ ಸ್ವತಂತ್ರನಾಗಿರುತ್ತಾನೆ. ಅಲ್ಲಾಹನಗಾಗಿ ಉಪವಾಸ ಇರಿಸುವವನನ್ನು, ತನ್ನ ಆಹಾರ ಪಾನೀಯುವನ್ನು ಕಡಿಮೆಗೊಳಿಸುವವನನ್ನು ಮತ್ತು ತನ್ನ ಆಧ್ಯಾತ್ಮಿಕತೆಯಲ್ಲಿ ವರ್ಧನೆ ಉಂಟುಮಾಡಲು ಪ್ರಯತ್ನಿಸುವವನನ್ನು ಸಂಪೂರ್ಣವಾಗಿ ಅವನು ತನ್ನ ಸಂರಕ್ಷಣೆಯ ಕೋಟೆಯೊಳಗೆ ಇರಿಸುತ್ತಾನೆ. ಅಂತಹವರು ಲೌಕಿಕವಾದ ಆಹಾರವನ್ನು ಕಡಿಮೆಗೊಳಿಸಿಕೊಂಡು ಆಧ್ಯಾತ್ಮಿಕ ಆಹಾರವನ್ನು ವರ್ಧಿಸುತ್ತಾರೆ ಅಥವಾ ವರ್ಧಿಸಲು ಪ್ರಯತ್ನಿಸುತ್ತಾರೆ. ಇದೇ ರಮಝಾನಿನ ಮತ್ತು ಉಪವಾಸದ ತಿರುಳಾಗಿದೆ. (ಮಲ್‌ಫೂಝಾತ್, ಸಂಪುಟ–9, ಪುಟ–123)

ಅಲ್ಲಾಹನು ಅಂತಹವರ ಶೈತಾನನನ್ನು ಸಂಪೂರ್ಣವಾಗಿ ಕಟ್ಟಿಹಿಡಿಯುತ್ತಾನೆ ಮತ್ತು ಉಪವಾಸಿಗನ ಪ್ರತಿಫಲ ಸ್ವತಃ ಅಲ್ಲಾಹನೇ ಆಗಿರುತ್ತಾನೆ ಎಂದು ಅವನು ಹೇಳಿರುವನು. (ಸಹೀಹ್ ಬುಖಾರಿ, ಹದೀಸ್–7492) ಇದು ಎಷ್ಟು ಹಿರಿದಾದ ಸುವಾರ್ತೆಯಾಗಿದೆ. ಆದ್ದರಿಂದ ನಾವು ಈ ಅನುಗ್ರಹದಿಂದ ಪಾಲು ಪಡೆಯಲು ಪ್ರಯತ್ನಿಸಬೇಕು ಮತ್ತು ನಮಗಾಗಿ ತೆರೆಯಲಾದ ಪ್ರತಿಯೊಂದು ಬಾಗಿಲುಗಳಿಂದ ಪ್ರವೇಶಿಸಲು ಪ್ರಯತ್ನಿಸಬೇಕಾಗಿದೆ. ನೀವು ಹಸಿವಿನಿಂದ ಮತ್ತು ಬಾಯಾರಿಕೆಯಿಂದ ಇರುವುದರಲ್ಲಿ ನನಗೆ ಯಾವುದೇ ಆಸಕ್ತಿಯಿಲ್ಲವೆಂದು ಯಾರ ಬಗ್ಗೆ ಅಲ್ಲಾಹನು ಹೇಳಿರುವನೋ ಅವರಲ್ಲಿ ನಾವು ಸೇರದವರಾಗಲಿ. ನೀವು ಬೆಳಿಗ್ಗೆ ಸಹರಿ ಮಾಡಿ ಮತ್ತು ಸಂಜೆ ಇಫ್‌ತಾರಿ ಮಾಡಿದರೂ ಬೆಳಿಗ್ಗೆ ರಾತ್ರಿ ಮಾಡಬೇಕಾದ ಸತ್ಕರ್ಮಗಳನ್ನು ಮಾಡದಿದ್ದರೆ, ನೀವು ಹಸಿವಿನಂದ

ಮತ್ತು ಬಾಯಾರಿಕೆಯಿಂದ ಇರುವುದರಲ್ಲಿ ನಿಮಗೆ ಯಾವುದೇ ಪ್ರಯೋಜನವಿಲ್ಲ. ಅಲ್ಲಾಹನಿಗೂ ನಿಮ್ಮ ಹಸಿವು ಮತ್ತು ಬಾಯಾರಿಕೆಯ ಯಾವುದೇ ಪರಿವೆ ಇರದು. ಈ ಸಂದೇಶ ನಮಗೆ ಹಝ್ರತ್ ಪೈಗಂಬರ್(ಸ)ರ ಮೂಲಕ ಲಭಿಸಿದೆ. (ಸಹೀಹ್ ಬುಖಾರಿ, ಕಿತಾಬುಸ್ಸೌಮ್, ಹದೀಸ್–1903)

ಆದ್ದರಿಂದ ನಾವು ಈ ಉದ್ದೇಶವನ್ನು ಅರಿಯುವ ಮತ್ತು ಅದರ ಪ್ರಕಾರ ನಮ್ಮ ಜೀವಿತಗಳನ್ನು ಸಾಗಿಸುವ ಆವಶ್ಯಕತೆಯಿದೆ. ಇದೇ ರಮಝಾನಿನ ಉದ್ದೇಶವಾಗಿದೆ.

ನಾನು ಪಾರಾಯಣ ಮಾಡಿದ ವಚನವು ರಮಝಾನಿನ ಪ್ರಾಧಾನ್ಯ ಮತ್ತು ಅದಕ್ಕೆ ಸಂಬಂಧಿಸಿದ ಆದೇಶಗಳ ನಡುವೆ ಬರುವ ವಚನವಾಗಿದೆ. ಅದರಲ್ಲಿ ಅಲ್ಲಾಹನು ದುಆ ಸ್ವೀಕಾರದ ರೀತಿ ಮತ್ತು ಯಾರ ದುಆಗಳು ಸ್ವೀಕಾರವಾಗುತ್ತವೆ ಎಂಬುದರ ಕುರಿತು ಹೇಳಿರುವನು. ಅಲ್ಲಾಹನ ದಾಸರು ಅಥವಾ ಅಲ್ಲಾಹನ ದಾಸರಾಗಲು ಬಯಸುವವರ ಮತ್ತು ಶೈತಾನನ ಮುಷ್ಟಿಯಿಂದ ಹೊರಗೆ ಬರಲು ಬಯಸುವವರ ಹಾಗೂ ದುಆ ಸ್ವೀಕಾರದ ದೃಶ್ಯಗಳನ್ನು ನೋಡಲು ಬಯಸುವವರ ಕುರಿತು ಇದರಲ್ಲಿ ಹೇಳಿರುವನು. ಅಲ್ಲಾಹನು ಆರಂಭವೇ ಈ ರೀತಿಯಾಗಿ ಮಾಡಿರುವನು. ಒಬ್ಬ ಪ್ರೇಮಿ ಅಸಮಾಧಾನದಿಂದ ಮತ್ತು ಅಲ್ಲಾಹನನ್ನು ಪಡೆಯುವ ಪ್ರಯತ್ನದಿಂದ ನಮ್ಮ ದೇವನು ಎಲ್ಲಿದ್ದಾನೆ ಎಂದು ಎಲೈ ಪ್ರವಾದಿ, ನಿಮ್ಮೊಡನೆ ಪ್ರಶ್ನಿಸುವಾಗ ನೀವು ಅವರೊಡನೆ ಹೇಳಿರಿ: ಭಯಪಡಬೇಡಿರಿ, ನಾನು ನಿಮ್ಮ ಸಮೀಪದಲ್ಲೇ ಇದ್ದೇನೆ. ಆದ್ದರಿಂದ ನನ್ನ ಸಕಲ ಗುಣವೈಶಿಷ್ಟ್ಯಗಳ ಮೇಲೆ ಪರಿಪೂರ್ಣ ದೃಢವಿಶ್ವಾಸ ಮತ್ತು ನಂಬಿಕೆಯಿರಿಸಿರಿ. ಆದ್ದರಿಂದ ಮೊದಲ ನಿಬಂಧನೆ ಎಂಬುದು ಮನುಷ್ಯನು ಅವನ ದಾಸನಾಗಬೇಕು ಎಂಬುವುದಾಗಿದೆ.

ಮನುಷ್ಯನು ಅಲ್ಲಾಹನ ದಾಸನಾಗುವ ಕರ್ತವ್ಯವನ್ನು ಈಡೇರಿಸಿದರೆ ಅಲ್ಲಾಹನು ಮನುಷ್ಯನ ಕರೆಯನ್ನು ಆಲಿಸುವನು ಮತ್ತು ಅವನ ಶೈತಾನನನ್ನು ಬಿಗಿಯಲಾಗುವುದು. ಶೈತಾನನು ದಾಳಿ ಮಾಡಲು ಬರುವಾಗಲೆಲ್ಲ ಅಲ್ಲಾಹನು ಸಹಾಯಕ್ಕಾಗಿ ಬರುವನು. ಕೇವಲ ರಮಝಾನ್ ಮಾಸದ ಒಂದು ತಿಂಗಳಲ್ಲಿ ಮಾತ್ರವಲ್ಲ. ಬದಲಾಗಿ ಸದಾ ಶೈತಾನನ ದಾಳಿಯಿಂದ ರಕ್ಷಿಸುವನು. ಅದಕ್ಕಿರುವ ನಿಬಂಧನೆ ಏನೆಂದರೆ, ಅಲ್ಲಾಹನ ದಾಸನು ಈಡೇರಿಸಬೇಕಾದ ಕರ್ತವ್ಯವನ್ನು ಮನುಷ್ಯನು ಈಡೇರಿಸಬೇಕು ಮತ್ತು ಅಲ್ಲಾಹನ ಆದೇಶಗಳನ್ನು ಸದಾ ಪಾಲಿಸಬೇಕು. ರಮಝಾನ್ ಮಾಸದಲ್ಲಿ ಮಾತ್ರ ಒಳಿತುಗಳನ್ನು ಮಾಡುವುದಲ್ಲ. ಬದಲಾಗಿ ಅಲ್ಲಾಹನೊಂದಿಗೆ ಮತ್ತು ಸೃಷ್ಟಿಗಳೊಂದಿಗೆ ಈಡೇರಿಸಬೇಕಾದ ಕರ್ತವ್ಯಗಳನ್ನು ಮಾಡಬೇಕು. ಪವಿತ್ರ ಖುರ್‌ಆನಿನ ಪಾಠಗಳ ಪ್ರಕಾರ ನಡೆದುಕೊಂಡು ನಮ್ಮ ವಿಶ್ವಾಸವನ್ನು ಸುದೃಢಗೊಳಿಸಬೇಕು. ಅಲ್ಲಾಹನ ಎಲ್ಲ ಗುಣವೈಶಿಷ್ಟ್ಯಗಳ ಮೇಲೆ ಪರಿಪೂರ್ಣ ವಿಶ್ವಾಸ ಮತ್ತು ನಂಬಿಕೆಯನ್ನು ಇರಿಸಬೇಕು. ಅನಂತರ ದುಆ ಸ್ವೀಕಾರದ ದೃಶ್ಯಗಳು ಯಾವ ರೀತಿಯಲ್ಲಿ ಆಗಿರುವುವು ಎಂದು ನೋಡಿರಿ. ತಮ್ಮ ಜೀವಿತಗಳನ್ನು ಈ ರೀತಿಯಾಗಿ ಮಾಡುವವರೇ ನೈಜ ಸನ್ಮಾರ್ಗವನ್ನು ಪಡೆಯುವವರಾಗಿರುತ್ತಾರೆ.

ಈ ರಮಝಾನನ್ನು ಸದಾ ತನ್ನ ದುಆ ಸ್ವೀಕಾರದ ಮಾರ್ಗವನ್ನಾಗಿ ಮಾಡುವವರು, ಅಲ್ಲಾಹನ ನೈಜ ದಾಸನಾಗುವವರು, ಅಲ್ಲಾಹನ ಆದೇಶಗಳನ್ನು ಅನುಸರಿಸುವವರು ಮತ್ತು ತಮ್ಮ ವಿಶ್ವಾಸವನ್ನು ಪರಿಪೂರ್ಣಗೊಳಿಸುವವರು ಸೌಭಾಗ್ಯಶಾಲಿಗಳಾಗಿರುವರು. ನಮಗೆ ಅಲ್ಲಾಹನು ಈ ಕಾಲಘಟ್ಟದ ಇಮಾಮ್ ಮತ್ತು ಹಝ್ರತ್ ಪೈಗಂಬರ್(ಸ)ರ ಸತ್ಯಪ್ರೇಮಿಯಾದ ಹಝ್ರತ್ ಮಸೀಹ್ ಮೌಊದ್(ಅ)ರನ್ನು ನಂಬುವ ಸೌಭಾಗ್ಯ ನೀಡಿರುವನು ಎಂಬುದು ನಮ್ಮ ಅದೃಷ್ಟವಾಗಿದೆ. ಅವರು ನಮಗೆ ಅಲ್ಲಾಹನ ಸಾಮೀಪ್ಯ ಗಳಿಸುವ ಮಾರ್ಗ ಮತ್ತು ದುಆ ಸ್ವೀಕಾರದ ಮಾರ್ಗವನ್ನು ತೋರಿಸಿಕೊಟ್ಟಿರುವರು. ಹಝ್ರತ್ ಮಸೀಹ್ ಮೌಊದ್(ಅ) ಒಮ್ಮೆ ಹೇಳಿದರು: ವೈಭವಶಾಲಿಯಾದ ಅಲ್ಲಾಹನು ತನ್ನ ಸೃಷ್ಟಿಗಳಿಗಾಗಿ ತೆರೆದಿರುವ ಬಾಗಿಲು ಒಂದೇ ಆಗಿದೆ. ಅದು ದುಆದ ಬಾಗಿಲಾಗಿದೆ. ಒಬ್ಬ ವ್ಯಕ್ತಿ ಅಳಲು ಮತ್ತು ರೋದನದಿಂದ ಈ ಬಾಗಿಲಿನ ಮೂಲಕ ಪ್ರವೇಶಿಸುವಾಗ ಕೃಪಾಳುವಾದ ಅಲ್ಲಾಹನು ಅವನಿಗೆ ಪರಿಶುದ್ಧತೆ ಮತ್ತು ನಿರ್ಮಲತೆಯ ಹೊದಿಕೆಯನ್ನು ಹೊದಿಸುತ್ತಾನೆ ಮತ್ತು ತನ್ನ ವೈಭವವನ್ನು ಅವನ ಮನಸ್ಸಲ್ಲಿ ಎಷ್ಟರ ಮಟ್ಟಿಗೆ ಇರಿಸುತ್ತಾನೆ ಎಂದರೆ, ಮನುಷ್ಯನು ವ್ಯರ್ಥವಾದ ಕೆಲಸಗಳಿಂದಲೂ ಮತ್ತು ಅನಾವಶ್ಯಕವಾದ ಚಲನವಲನಗಳಿಂದಲೂ ಬಲುದೂರವಾಗುತ್ತಾನೆ.

(ಮಲ್‌ಫೂಝಾತ್, ಸಂಪುಟ–5, ಪುಟ–438, 1984 ಆವೃತಿ)

ದುಆ ಸ್ವೀಕಾರಕ್ಕಾಗಿ ಎಂತಹ ಸ್ಥಿತಿಯನ್ನು ಉಂಟುಮಾಡುವ ಆವಶ್ಯಕತೆಯಿದೆ ಎಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಯಾರು ಏನೂ ಮಾಡದೇ ದುಆ ಮಾಡುತ್ತಾನೋ ಅವನು ಮಾಡುವುದು ಪ್ರಾರ್ಥನೆಯಲ್ಲ, ಬದಲಾಗಿ ಅವನು ಅಲ್ಲಾಹನನ್ನು ಪರೀಕ್ಷೆ ಮಾಡಲು ಪ್ರಯತ್ನಿಸುತ್ತಾನೆ.

ಆದ್ದರಿಂದ ದುಆ ಮಾಡುವುದಕ್ಕೆ ಮುಂಚಿತವಾಗಿ ತನ್ನ ಎಲ್ಲ ಶಕ್ತಿಗಳನ್ನು ಖರ್ಚು ಮಾಡುವುದು ಅವಶ್ಯ. ಇದೇ **ಇಹ್‌ದಿನಸ್ಸಿರಾತಲ್ ಮುಸ್ತಖೀಂ** ಎಂಬ ಪ್ರಾರ್ಥನೆಯ ಅರ್ಥವಾಗಿದೆ. ಮೊದಲು ಮನುಷ್ಯನು ತನ್ನ ವಿಶ್ವಾಸಗಳು ಮತ್ತು ತನ್ನ ಕೃತ್ಯಗಳ ಬಗ್ಗೆ ಗಮನವಿಡಬೇಕು. ಏಕೆಂದರೆ ಸುಧಾರಣೆಯು ಕಾರಣಗಳ ಮೂಲಕ ಮಾಡಿಸುತ್ತಾನೆ ಎಂಬುದು ಅಲ್ಲಾಹನ ರೂಢಿಯಾಗಿದೆ. ಸುಧಾರಣೆಗೆ ಕಾರಣವಾಗುವಂತಹ ಏನಾದರೂ ಸಂಗತಿಗಳನ್ನು ಅಲ್ಲಾಹನು ಉಂಟುಮಾಡುತ್ತಾನೆ. ದುಆ ಮಾಡುವಾಗ ಬೇರೆ ಸಂಗತಿಗಳ ಬೇರೆ ಮಾರ್ಗಗಳ ಆವಶ್ಯಕತೆಯೇನು ಎಂದು ಕೆಲವರು ಕೇಳುತ್ತಾರೆ. ದುಆ ಮಾಡುವುದಾದರೆ, ಬೇರೆ ಕೃತ್ಯದ, ಸಂಗತಿಗಳ, ಪ್ರಯತ್ನದ ಆವಶ್ಯಕತೆಯಿಲ್ಲವೆಂದು ಹೇಳುತ್ತಾರೆ. ಇದು ಮೂರ್ಖತನವಾಗಿದೆ. ದುಆ ಕೂಡ ಒಂದು ಕೆಲಸ ನಡೆಯಲಿಕ್ಕಿರುವ ಒಂದು ರಹಸ್ಯವಾದ ಕಾರಣವಾಗಿದೆ, ಸಂಗತಿಯಾಗಿದೆ. (ಮಲ್‌ಫೂಝಾತ್, ಸಂಪುಟ–1, ಪುಟ–124. 1984) ಅದು ಇತರ ಕಾರಣಗಳನ್ನು, ಸಂಗತಿಗಳನ್ನು ಉಂಟುಮಾಡುತ್ತದೆ.

ಆದ್ದರಿಂದ ದುಆಗಾಗಿ, ಅಲ್ಲಾಹನ ದಾಸನಾಗಲಿಕ್ಕಾಗಿ ಆವಶ್ಯವಾಗಿರುವುದೇನೆಂದರೆ, ಮನುಷ್ಯನು ಪ್ರಯತ್ನಪಟ್ಟು ಅಲ್ಲಾಹನಿಂದ ಅನುಗ್ರಹವನ್ನು ಬೇಡಬೇಕು. ಅಲ್ಲಾಹನ ದಾಸರಲ್ಲಿ ಸೇರುವುದೇ ಅನುಗ್ರಹವಾಗಿದೆ. ಅಲ್ಲಾಹನ ದಾಸರಲ್ಲಿ ಸೇರಿಸಲು ದುಆ ಮಾಡಬೇಕು. ವಿಶ್ವಾಸ ಮತ್ತು ಸತ್ಕರ್ಮಗಳ ದೃಷ್ಟಿಯಲ್ಲಿ ಅಲ್ಲಾಹನ ನಿಷ್ಠಾವಂತ ದಾಸರಲ್ಲಿ ಸೇರುವಂತಾಗಲು, ತನ್ನ ವಿಶ್ವಾಸದಲ್ಲಿ ಸ್ಥಿರಚಿತ್ತರಾಗಿರುವ ದಾಸರಲ್ಲಿ ಸೇರುವಂತಾಗಲು ಪ್ರಾರ್ಥಿಸಬೇಕು. ಮಣ್ಣನ್ನು ಕೂಡ ಚಿನ್ನವನ್ನಾಗಿ ಮಾಡಲು ಅಲ್ಲಾಹನಿಗೆ ಶಕ್ತಿಯಿದೆ ಎಂದು ದೃಢವಿಶ್ವಾಸವಿರುವ ದಾಸರಲ್ಲಿ ಸೇರುವಂತಾಗಲು, ಅತ್ಯಂತ ಕೆಟ್ಟವನನ್ನು ಕೂಡ ತನ್ನ ದಾಸರನ್ನಾಗಿ ಮಾಡಲು ಅಲ್ಲಾಹನಿಗೆ ಸಾಧ್ಯವೆಂದು ನಂಬುವ ದಾಸರಲ್ಲಿ ಸೇರುವಂತಾಗಲು ದುಆ ಮಾಡಬೇಕು. ಇದೇ ವಿಷಯವನ್ನು ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳಿರುವನು. ಅಲ್ಲಾಹನ ಮಾರ್ಗದಲ್ಲಿ ನಡೆಯಲು ಕಠಿಣ ಪ್ರಯತ್ನ ಮಾಡುವವರಿಗೆ ಅಲ್ಲಾಹನು ತನ್ನ ಮಾರ್ಗವನ್ನು ತೋರಿಸುವನು ಎಂದು ಅಲ್ಲಾಹನು ಹೇಳಿರುವನು. ಅಲ್ಲಾಹನು ಹೀಗೆ ಹೇಳಿರುವನು: **ವಲ್ಲಧೀನ ಜಾಹದೂ ಫೀನಾ ಲನಹ್‌ದಿಯನ್ನಹುಂ ಸುಬುಲನಾ**. ಎಂದರೆ, ಯಾರು ನಮ್ಮನ್ನು ಭೇಟಿಯಾಗಲು ಪರಿಶ್ರಮಿಸುತ್ತಾರೋ ಅವರಿಗೆ ನಾವು ಖಂಡಿತವಾಗಿಯೂ ನಮ್ಮ ಮಾರ್ಗಗಳನ್ನು ತೋರಿಸಿ ಕೊಡುವೆವು. ಆದ್ದರಿಂದ ರಮಝಾನ್ ಮಾಸವು ವಿಶೇಷವಾಗಿ ಈ ಕಠಿಣ ಪರಿಶ್ರಮದ ಮಾಸವಾಗಿದೆ. ಈ ತಿಂಗಳಲ್ಲಿ ನಾವು ಸರ್ವ ಪ್ರಯತ್ನವನ್ನು ಮಾಡಬೇಕು. ನಾವು ಅಲ್ಲಾಹನ ದಾಸರಲ್ಲಿ ಸೇರುವಂತಾಗಲು ಮತ್ತು ಅಲ್ಲಾಹನ ಸಾಮೀಪ್ಯ ಗಳಿಸಿದವರಲ್ಲಿ ಸೇರುವಂತಾಗಲು ಕಠಿಣ ಪರಿಶ್ರಮವನ್ನು ಮಾಡಬೇಕು. ಯಾರ ದುಆಗಳನ್ನು ಅಲ್ಲಾಹನು ಆಲಿಸುತ್ತಾನೋ, ಯಾರು ಅಲ್ಲಾಹನ ಆಜ್ಞೆಗಳ ಮೇಲೆ ನಡೆಯುತ್ತಾರೋ, ಯಾರಿಗೆ ಅಲ್ಲಾಹನ ಸಕಲ ಗುಣ ವೈಶಿಷ್ಟ್ಯಗಳ ಮೇಲೆ ದೃಢವಿಶ್ವಾಸವಿದೆಯೋ, ಯಾರು ಯಥಾರ್ಥ ಸನ್ಮಾರ್ಗಿಗಳಾಗಿರುವರೋ, ಯಾರ ಶೈತಾನ ಸದಾ ಬಿಗಿಯಲಾಗಿದೆಯೋ ಅವರಲ್ಲಿ ಸೇರುವಂತಾಗಲು ಪ್ರಯತ್ನಿಸಬೇಕು. ಅದಕ್ಕಾಗಿ ಒಂದು ಜಿಹಾದಿನ ಆವಶ್ಯಕತೆಯಿದೆ. ತಮ್ಮ ಸ್ಥಿತಿಗತಿಗಳನ್ನು ಅಲ್ಲಾಹನ ಸಂಪ್ರೀತಿಯ ಪ್ರಕಾರ ಮಾಡುವ ಆವಶ್ಯಕತೆಯಿದೆ. ಈ ಕುರಿತು ಹಝ್ರತ್ ಮಸೀಹ್ ಮೌಊದ್(ಅ) ಅನೇಕ ಸಂದರ್ಭಗಳಲ್ಲಿ ನಮಗೆ ಮಾರ್ಗಸೂಚಿ ತೋರಿಸಿರುವರು. ಒಂದೆಡೆ ಅವರು ಹೇಳುತ್ತಾರೆ: ಸಕಲ ಬುದ್ಧಿ, ಸರ್ವ ಶಕ್ತಿ ಹಾಗೂ ಪರಿಪೂರ್ಣ ನಿಷ್ಠೆಯಿಂದ ಅಲ್ಲಾಹನನ್ನು ಹುಡುಕುವ ವ್ಯಕ್ತಿಯ ಅಂತೆಯೇ ಅತ್ಯಂತ ಅಜಾಗರೂಕನಾಗಿ ಆಲಸಿಗನಾಗಿರುವ ವ್ಯಕ್ತಿಯು ಅಲ್ಲಾಹನ ವರದಾನಗಳಿಂದ ಪ್ರಯೋಜನ ಪಡೆಯಲು ಹೇಗೆ ಸಾಧ್ಯ? ಇದರ ಕಡೆಗೆ ಅಲ್ಲಾಹನು ಸೂಚನೆ ನೀಡಿರುವನು. ಅದೇನೆಂದರೆ, **ವಲ್ಲಧೀನ ಜಾಹದೂ ಫೀನಾ ಲನಹ್‌ದಿಯನ್ನಹುಂ ಸುಬುಲನಾ**. ಎಂದರೆ, ಯಾರು ನಮ್ಮನ್ನು ಭೇಟಿಯಾಗಲು ಪರಿಶ್ರಮಿಸುತ್ತಾರೋ ಅವರಿಗೆ ನಾವು ಖಂಡಿತವಾಗಿಯೂ ನಮ್ಮ ಮಾರ್ಗಗಳನ್ನು ತೋರಿಸಿ ಕೊಡುವೆವು. (ಬರಾಹೀನೆ ಅಹ್ಮದೀಯ, ಭಾಗ–4, ರೂಹಾನಿ ಖಝಾಈನ್, ಸಂಪುಟ–1, ಪುಟ–566–567, ಅಡಿಟಿಪ್ಪಣಿ–11)

ನಿರ್ಲಕ್ಷ್ಯ ಮತ್ತು ಮಡಿವಂತಿಕೆ ತೋರಿಸುವವನನ್ನು ಸರ್ವ ಶಕ್ತಿಗಳೊಂದಿಗೆ ಮತ್ತು ಸಾಮರ್ಥ್ಯದೊಂದಿಗೆ ಅಲ್ಲಾಹನ ಸಾಮೀಪ್ಯ ಗಳಿಸಲು ಪ್ರಯತ್ನಿಸುವವರ ಜೊತೆಗೆ ಸೇರಿಸಲು ಸಾಧ್ಯವಲ್ಲ.

ಜನರು ಪ್ರಶ್ನೆ ಕೇಳುತ್ತಾರೆ ಮತ್ತು ನಾವು ಬಹಳವಾಗಿ ದುಆ ಮಾಡಿದೆವು ಆದರೆ ನಮ್ಮ ಉದ್ದೇಶದಲ್ಲಿ ಯಶಸ್ಸು ಗಳಿಸಲಿಲ್ಲವೆಂದು ನನಗೆ ಪತ್ರ ಬರೆದು ಹೇಳುತ್ತಾರೆ. ಹೀಗೆ ಹೇಳುವವರು ತಪ್ಪು ಹೇಳುತ್ತಿರುವರು.

ಅದರಲ್ಲಿ ಅಲ್ಲಾಹನ ಯಾವುದೇ ತಪ್ಪಿಲ್ಲ. ಒಬ್ಬ ವ್ಯಕ್ತಿ ತನ್ನಷ್ಟಕ್ಕೆ ಉನ್ನತ ಮಟ್ಟವೆಂದು ಭಾವಿಸುವ ಮಟ್ಟವು ಅಲ್ಲಾಹನ ದೃಷ್ಟಿಯಲ್ಲಿ ಅದರಲ್ಲಿ ಕೊರತೆಯಿರಬಹುದು. ಹೆಚ್ಚಿನ ಪ್ರಯತ್ನದ ಆವಶ್ಯಕತೆಯಿರಬಹುದು. ಅದೇ ರೀತಿಯಲ್ಲಿ ದುಆ ಮಾಡುವ ತನ್ನ ರೀತಿಯನ್ನು ಕೂಡ ನೋಡಬೇಕಾಗಿದೆ. ಯಾರು ತನ್ನ ಸಕಲ ಬುದ್ಧಿ, ಸರ್ವ ಶಕ್ತಿ ಹಾಗೂ ಪರಿಪೂರ್ಣ ನಿಷ್ಠೆಯಿಂದ ಅಲ್ಲಾಹನನ್ನು ಹುಡುಕುತ್ತಾನೋ ಅವನಗೆ ಅಲ್ಲಾಹನು ಖಂಡಿತ ತನ್ನ ಮಾರ್ಗವನ್ನು ತೋರಿಸಿಕೊಡುವನು ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ನಾವು ನಮ್ಮ ಸಕಲ ಬುದ್ಧಿ, ಸರ್ವ ಶಕ್ತಿ ಹಾಗೂ ಪರಿಪೂರ್ಣ ನಿಷ್ಠೆಯಿಂದ ಅಲ್ಲಾಹನ ಆದೇಶಗಳನ್ನು ಪಾಲಿಸುತ್ತಿದ್ದೇವೆಯೇ ಎಂದು ನೋಡಬೇಕಾಗಿದೆ. ಇಲ್ಲವೆಂದಾದರೆ, ನಮ್ಮ ದುಆಗಳನ್ನು ಆಲಿಸಲಾಗಿಲ್ಲವೆಂದು ನಾವು ದೂರುವಂತಿಲ್ಲ. ಒಟ್ಟಿನಲ್ಲಿ, ದುಆಗಳ ಸ್ವೀಕಾರಕ್ಕಾಗಿಯೂ ಮೊದಲು ತನ್ನ ಸ್ಥಿತಿಗಳನ್ನು ಬದಲಿಸಿ ಅಲ್ಲಾಹನ ಕಡೆಗೆ ಹೆಜ್ಜೆ ಹಾಕುವುದು ಅವಶ್ಯ. ಕಠಿಣ ಪ್ರಯತ್ನ ಮಾಡುವುದು ಅವಶ್ಯ.

ಮನುಷ್ಯನು ಮಾಡುವ ಕಠಿಣ ಪ್ರಯತ್ನವಾದರೂ ಎಂಥದ್ದು? ಅಲ್ಲಾಹನು ತನ್ನ ದಾಸರ ಮೇಲೆ ಎಷ್ಟು ದಯಾಳುವಾಗಿರುತ್ತಾನೆ ಎಂದರೆ, ಅವನ ಅಲ್ಪವಾದ ಪ್ರಯತ್ನವನ್ನು ಕೂಡ ಜಿಹಾದ್ ಎಂದು ಹೇಳಿಕೊಂಡು ಅದಕ್ಕೆ ಪ್ರತಿಫಲ ಕೊಡುತ್ತಾನೆ. ಅವನ ಕೃಪೆ ಎಲ್ಲ ವಸ್ತುಗಳ ಮೇಲೆ ಇರುವಾಗ, ದಾಸನ ಜಿಹಾದ್ ಕೂಡ ಸುಲಭವಾಗಿರುತ್ತದೆ. ಅದನ್ನು ಕೂಡ ಅಲ್ಲಾಹನು ಸುಲಭಗೊಳಿಸುತ್ತಾನೆ. ಹಝ್ರತ್ ಪೈಗಂಬರ್(ಸ) ಹೇಳಿದರು: ನನ್ನ ದಾಸ ನನ್ನ ಕಡೆಗೆ ಒಂದು ಹೆಜ್ಜೆ ಹಾಕುವಾಗ ನಾನು ಎರಡು ಹೆಜ್ಜೆಗಳನ್ನು ಹಾಕುತ್ತೇನೆ, ದಾಸನು ನನ್ನ ಕಡೆಗೆ ವೇಗವಾಗಿ ನಡೆದು ಬರುವಾಗ ನಾನು ಓಡುತ್ತಾ ಅವನ ಕಡೆಗೆ ಹೋಗುತ್ತೇನೆ ಎಂದು ಅಲ್ಲಾಹನು ಹೇಳಿರುವನು. (ಸಹೀಹ್ ಮುಸ್ಲಿಮ್, ಕಿತಾಬುಝ್ಝಿಕ್ರ್ ವದ್ದುಆ, ಹದೀಸ್–6833)

ಅಲ್ಲಾಹನಂತು ನಮ್ಮ ಮೇಲೆ ಅತ್ಯಂತ ದಯಾಳುವಾಗಿರುತ್ತಾನೆ. ಆದರೆ ಪ್ರಾಮಾಣಿಕತೆ ಮತ್ತು ನಿಷ್ಠೆ ಅದಕ್ಕಿರುವ ನಿಬಂಧನೆಗಳಾಗಿವೆ. ನಾವು ನಮಾಝ್‌ಗಳನ್ನು ನಿರ್ವಹಿಸುವೆವು, ಅಲ್ಲಾಹನ ಆದೇಶಗಳನ್ನು ಮತ್ತು ಸೃಷ್ಟಿಗಳೊಂದಿಗೆ ಮಾಡಬೇಕಾದ ಹಕ್ಕುಗಳನ್ನು ಈಡೇರಿಸುವೆವು ಎಂದು ರಮಝಾನನಲ್ಲಿ ವಾದಿಸಿಕೊಂಡು ರಮಝಾನ್ ದಾಟಿಹೋದ ನಂತರ ಅಲ್ಲಾಹನನ್ನು ಮತ್ತು ಅವನ ಆದೇಶಗಳನ್ನು ಮರೆಯುವುದು ಸರಿಯಲ್ಲ.

ಕರೆಯುವವನ ಕರೆಯನ್ನು ನಾನು ಆಲಿಸುತ್ತೇನೆ ಎಂದು ಅಲ್ಲಾಹನು ಹೇಳುತ್ತಾನೆ. ಆದರೆ ರಮಝಾನಿನಲ್ಲಿ ನನ್ನ ಪ್ರಾರ್ಥನೆಗಳನ್ನು ಆಲಿಸಲಾಗಿಲ್ಲವೆಂದು ಲೌಕಿಕತೆಯಲ್ಲಿ ಮುಳುಗಿರುವವರು ದೂರುವಂತಿಲ್ಲ.

ಅಲ್ಲಾಹನಂದ ಯಾವುದೇ ಸಂಗತಿ ಗೋಪ್ಯವಲ್ಲವೆಂಬುದನ್ನು ಸದಾ ನೆನಪಿಲ್ಲಿಡಬೇಕು. ಮನುಷ್ಯನು ತನ್ನ ನಿಷ್ಠೆಯ ವಾಗ್ದಾನವನ್ನು ಹಿಂದೆ ಕೂಡ ಮುರಿದಿರುವನು, ಈಗ ರಮಝಾನಿನಲ್ಲಿ ಮಾತ್ರ ಸತ್ಕರ್ಮಗಳ ಕಡೆಗೆ ಗಮನಹರಿಸುತ್ತಿದ್ದಾನೆ ಎಂಬುದು ಕೂಡ ಅಲ್ಲಾಹನಿಗೆ ಗೊತ್ತಿರುತ್ತದೆ. ಅಂತಹ ಜನರೊಂದಿಗೆ ಅಲ್ಲಾಹನು ಇಚ್ಛಿಸುವಂತೆ ವರ್ತಿಸುವನು. ಆದರೆ ಕೆಲವೊಮ್ಮೆ ಅಂತಹ ಜನರ ದುಆಗಳನ್ನು ಕೂಡ ಅಲ್ಲಾಹನು ಸ್ವೀಕರಿಸುತ್ತಾನೆ. ಅಲ್ಲಾಹನು ದುಆಗಳನ್ನು ಆಲಿಸುತ್ತಾನೆ ಮತ್ತು ಅಲ್ಲಾಹನ ಕಡೆಗೆ ಸದಾ ಬಾಗಿಯಿರಬೇಕು ಎಂದು ಅರಿಯುವಂತಾಗಲು ಅಲ್ಲಾಹನು ಹೀಗೆ ಮಾಡುತ್ತಾನೆ. ಒಟ್ಟಿನಲ್ಲಿ ಅಲ್ಲಾಹನು ಮನುಷ್ಯನ ಮೇಲೆ ದೌರ್ಜನ್ಯವನ್ನು ಮಾಡುವುದಿಲ್ಲ. ಅಲ್ಲಾಹನಂತು ಸದಾ ತನ್ನ ದಾಸರನ್ನು ಪ್ರೀತಿಯ ಮಡಿಲಲ್ಲಿ ಇರಿಸಲು ಪ್ರಯತ್ನಿಸುತ್ತಾನೆ. ತಾಯಿಯೊಬ್ಬಳಿಗೆ ತನ್ನ ಕಾಣೆಯಾದ ಮಗು ಮರಳಿ ಲಭಿಸುವಾಗ ಉಂಟಾಗುವ ಸಂತೋಷ ಅಥವಾ ಯಾತ್ರಿಕನೊಬ್ಬನಗೆ ಮರುಭೂಮಿಯಲ್ಲಿ ಸಾಮಾನುಗಳ ಸಮೇತ ಕಾಣೆಯಾದ ಒಂಟೆ ಮರಳಿ ಲಭಿಸುವಾಗ ಉಂಟಾಗುವ ಖುಶಿಯಂತಹ ಖುಶಿಯು ದಾಸನು ತನ್ನ ಕಡೆಗೆ ಬರುವಾಗ ಅಲ್ಲಾಹನಿಗೆ ಆಗುತ್ತದೆ. (ಸಹೀಹ್ ಬುಖಾರಿ, ಕಿತಾಬುದ್ದಅವಾತ್, ಹದೀಸ್–6309)

ಸತ್ಯದಲ್ಲಿ ನಾವೇ ಅಲ್ಲಾಹನ ಹಕ್ಕುಗಳ ಈಡೇರುವಿಕೆಯಲ್ಲಿ ಕೊರತೆಯನ್ನು ಉಂಟುಮಾಡುತ್ತೇವೆ. ಮತ್ತೆ ನಾವೇ ಅಲ್ಲಾಹನು ನಮ್ಮ ದುಆಗಳನ್ನು ಆಲಿಸಲಿಲ್ಲವೆಂದು ದೂರುತ್ತೇವೆ. ಆದ್ದರಿಂದ ಈ ದೃಷ್ಟಿಯಲ್ಲಿ ನಾವು ನಮ್ಮ ಪರಿಶೋಧನೆ ನಡೆಸಬೇಕಾಗಿದೆ. ನಾವು ಈ ರಮಝಾನನ್ನು ಅಲ್ಲಾಹನನ್ನು ಗಳಿಸಲಿಕ್ಕಿರುವ ಮಾರ್ಗವನ್ನಾಗಿ ಮಾಡುವೆವು ಎಂದು ಪ್ರತಿಜ್ಞೆ ಮಾಡಬೇಕು. ಅವನ ಆದೇಶಗಳ ಪ್ರಕಾರ ನಡೆಯಲು ಸರ್ವ ಪ್ರಯತ್ನವನ್ನು ಮಾಡುವೆವು ಎಂದು ಪ್ರತಿಜ್ಞೆ ಮಾಡಬೇಕು.

ಎಂತಹ ಪರಿಸ್ಥಿತಿ ಉಂಟಾದರೂ ಎಷ್ಟು ದೀರ್ಘಕಾಲ ನಮಗೆ ಜಿಹಾದ್ ಮಾಡಬೇಕಾಗಿ ಬಂದರೂ ಅಲ್ಲಾಹನ ಪ್ರೀತಿ ಮತ್ತು ಸಾಮೀಪ್ಯವನ್ನು ಗಳಿಸಲು ನಾವು ಕಠಿನ ಪ್ರಯತ್ನ ಮಾಡುತ್ತಾ ಹೋಗುವೆವು ಎಂದು ಪ್ರತಿಜ್ಞೆ ಮಾಡಬೇಕು. ನಮ್ಮ ವಿಶ್ವಾಸಗಳನ್ನು ಸುದೃಢಗೊಳಿಸಲು ಪ್ರಯತ್ನ ಮಾಡುವೆವು ಎಂದು ಪ್ರತಿಜ್ಞೆ ಮಾಡಬೇಕು. ಇಂತಹ ಸ್ಥಿತಿಯನ್ನು ನಮ್ಮೊಳಗೆ ನಾವು ಉಂಟುಮಾಡಿದರೆ ದುಆ ಸ್ವೀಕಾರದ ಪವಾಡವನ್ನು ಕೂಡ ನಾವು ನೋಡುವವರಾಗುವೆವು. ಇದು ಕೇವಲ ಬಾಯಿಮಾತಲ್ಲ. ಬದಲಾಗಿ ಈ ಸ್ಥಾನವನ್ನು ಜನರು ಗಳಿಸುತ್ತಾ ಬಂದಿರುವರು. ಈಗಲೂ ಗಳಿಸುತ್ತಿದ್ದಾರೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಈ ವಚನ ಅವತೀರ್ಣವಾಗಿ ಸಾವಿರದ ಮುನ್ನೂರು ವರ್ಷಗಳು ದಾಟಿಹೋಗಿವೆ. ಈ ವಚನದ ಪ್ರಕಾರ ನಿಸ್ಸಂಶಯವಾಗಿಯೂ ಇಷ್ಟು ಕಾಲಾವಧಿಯಲ್ಲಿ ಕಠಿಣ ಪ್ರಯತ್ನ ಮಾಡಿದವರಿಗೆ ಅಲ್ಲಾಹನ ವಾಗ್ದಾನ ಪ್ರಕಾರ ಪಾಲು ಸಿಕ್ಕಿದೆ. ಈಗಲೂ ಸಿಗುತ್ತಿದೆ. ಮುಂದೆಯೂ ಸಿಗುವುದು. (ಅಲ್‌ಹಖ್ ಮುಬಾಹಿಸ ದೆಹಲಿ, ರೂಹಾನಿ ಖಝಾಈನ್, ಸಂಪುಟ–4, ಪುಟ–192)

ಆದ್ದರಿಂದ ಅಲ್ಲಾಹನ ಈ ಅನುಗ್ರಹದಿಂದ ಪಾಲುಗಾರರಾಗಲು ನಾವು ಪ್ರಯತ್ನಿಸಬೇಕಾಗಿದೆ. ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಿರುವ ಕಠಿಣ ಪ್ರಯತ್ನವನ್ನು, ಅಲ್ಲಾಹನ ಆಜ್ಞೆಗಳನ್ನು ಪಾಲಿಸುವ ಜಿಹಾದನ್ನು, ಪವಿತ್ರ ಖುರ್‌ಆನಿನ ಏಳುನೂರು ಆಜ್ಞೆಗಳನ್ನು ಅನುಸರಿಸುವ ಜಿಹಾದನ್ನು, ಸತ್ಯವಿಶ್ವಾಸವನ್ನು ಪರಿಪೂರ್ಣಗೊಳಿಸುವ ಜಿಹಾದನ್ನು, ಅಲ್ಲಾಹನ ಗುಣವೈಶಿಷ್ಟ್ಯಗಳನ್ನು ಗಳಿಸುವ ಕಠಿಣ ಪ್ರಯತ್ನ ಕಡಿಮೆಗೊಳ್ಳದಂತೆ ಎಚ್ಚರವಹಿಸಬೇಕು. ನಮ್ಮ ಪ್ರತಿಯೊಂದು ಹೆಜ್ಜೆ ಅಭಿವೃದ್ಧಿ ಕಡೆಗೆ ಸಾಗುವಂತಾಗಿರಬೇಕು. ಈ ರಮಝಾನ್ ನಮ್ಮ ಈ ಜಿಹಾದಿನ ಮೈಲುಗಲ್ಲಾಗಲಿ. ಇದು ಪದೇ ಪದೇ ಆಲಿಸಿ ಮನವರಿಕೆ ಮಾಡಬೇಕಾದ ಒಂದು ವಿಷಯವಾಗಿದೆ.

ಆದ್ದರಿಂದ ಈ ವಿಷಯಕ್ಕೆ ಸಂಬಂಧಪಟ್ಟು ಹಝ್ರತ್ ಮಸೀಹ್ ಮೌಊದ್(ಅ)ರ ಕೆಲವು ಉಪದೇಶಗಳನ್ನು ಮುಂದಿರಿಸುತ್ತೇನೆ.

ಅವರು(ಅ) ಹೇಳುತ್ತಾರೆ: ಯಾವ ರೀತಿಯಲ್ಲಿ ನಮ್ಮ ಲೌಕಿಕ ಜೀವಿತದಲ್ಲಿ ಪ್ರತಿಯೊಂದು ಕೃತ್ಯಕ್ಕಾಗಿ ಒಂದು ಖಚಿತ ಪರಿಣಾಮವಿರುತ್ತದೋ ಅದೇ ರೀತಿಯಲ್ಲಿ ದೀನಿಗೆ ಸಂಬಂಧಿಸಿಯೂ ಇದೇ ಕಾನೂನು ಜಾರಿಯಲ್ಲಿದೆ. ಅದನ್ನು ಅಲ್ಲಾಹನು ಎರಡು ಉದಾಹರಣೆಗಳ ಮೂಲಕ ಸ್ಪಷ್ಟವಾಗಿ ಹೇಳುತ್ತಾನೆ. ಅದೇನೆಂದರೆ, **ವಲ್ಲದೀನ ಜಾಹದೂ ಫೀನಾ ಲನಹ್‌ದಿಯನ್ನಹುಂ ಸುಬುಲನಾ**. ಎಂದರೆ, ಯಾರು ನಮ್ಮನ್ನು ಭೇಟಿಯಾಗಲು ಪರಿಶ್ರಮಿಸುತ್ತಾರೋ ಅವರಿಗೆ ನಾವು ಖಂಡಿತವಾಗಿಯೂ ನಮ್ಮ ಮಾರ್ಗಗಳನ್ನು ತೋರಿಸಿ ಕೊಡುವೆವು. ಅದೇ ರೀತಿಯಲ್ಲಿ ಹೀಗೆ ಹೇಳುತ್ತಾನೆ: **ಫಲಮ್ಮಾ ಝಾಗೂ ಅಝಾಗಲ್ಲಾಹು ಖುಲೂಬಹುಂ**. ಎಂದರೆ, ಅವರು ವಕ್ರತೆ ತೋರಿಸಿದಾಗ ಅಲ್ಲಾಹನು ಅವರ ಹೃದಯಗಳನ್ನು ವಕ್ರಗೊಳಿಸಿದನು. ಎಂದರೆ, ಅಲ್ಲಾಹನ ಅನ್ವೇಷಣೆಯಲ್ಲಿ, ಹುಡುಕಾಟದಲ್ಲಿ ಪರಿಪೂರ್ಣ ಪ್ರಯತ್ನ ಮಾಡುವವರಿಗಾಗಿ ನಾವು ನಮ್ಮ ಮಾರ್ಗವನ್ನು ತೋರಿಸುವೆವು ಮತ್ತು ಯಾರು ವಕ್ರತೆ ತೋರಿಸುತ್ತಾರೋ ಹಾಗೂ ಸನ್ಮಾರ್ಗದಲ್ಲಿ ನಡೆಯಲು ಬಯಸುವುದಿಲ್ಲವೋ ಅವರ ಹೃದಯಗಳನ್ನು ನಾವು ವಕ್ರಗೊಳಿಸುವೆವು ಎಂದು ಅಲ್ಲಾಹನು ಈ ಎರಡು ಉದಾಹರಣೆಗಳಲ್ಲಿ ಸ್ಪಷ್ಟವಾಗಿ ಹೇಳುತ್ತಾನೆ. (ಇಸ್ಲಾಮಿ ಉಸೂಲ್ ಕೀ ಫಿಲಾಸಫಿ, ರೂಹಾನಿ ಖಝಾಈನ್, ಸಂಪುಟ–10, ಪುಟ–389)

ಇದನ್ನು ಹಝ್ರತ್ ಮಸೀಹ್ ಮೌಊದ್(ಅ) ಮತ್ತೊಂದು ರೀತಿಯಲ್ಲಿ ಮುಂದಿರಿಸಿರುವರು. ಅದೇನೆಂದರೆ, ಅಲ್ಲಾಹನ ಮಾರ್ಗವನ್ನು ಗಳಿಸಲಿಕ್ಕಾಗಿ ನೀವು ಕಠಿಣ ಪ್ರಯತ್ನ ಮಾಡಿದರೆ ನೀವು ಅವನ ಅನುಗ್ರಹವನ್ನು ಗಳಿಸುವಿರಿ. ಆದರೆ ನೆನಪಿಡಬೇಕಾದ ಮತ್ತೊಂದು ಸಂಗತಿಯೇನೆಂದರೆ, ಅಲ್ಲಾಹನ ಮಾರ್ಗದಲ್ಲಿ ನಡೆಯದಿದ್ದರೆ ಅದರ ದುಷ್ಪರಿಣಾಮವೇನೆಂದರೆ, ನಿಮ್ಮ ಹೃದಯಗಳು ವಕ್ರತೆಯುಳ್ಳದ್ದಾಗುವುವು. ಪ್ರಾರ್ಥನೆಗಳ ಸ್ವೀಕಾರದ ಕಾರ್ಯ ಅಲ್ಲಿರಲಿ, ನೀವು ಅಲ್ಲಾಹನ ಮಾರ್ಗದಲ್ಲಿ ನಡೆಯದಿದ್ದರೆ ನೀವು ಶೈತಾನನ ಮಡಿಲಲ್ಲಿ ಬಿದ್ದುಕೊಳ್ಳುವಿರಿ. ಶೈತಾನನ ಮಡಿಲಲ್ಲಿ ಬಿದ್ದ ಮನುಷ್ಯನು ತನ್ನ ಇಹಲೋಕ ಮತ್ತು ಪರಲೋಕ ಎರಡನ್ನೂ ಕೇಡುಗೊಳಿಸುತ್ತಾನೆ. ಒಟ್ಟಿನಲ್ಲಿ ಈ ಉಪದೇಶದಲ್ಲಿ ಸುವಾರ್ತೆಯೊಂದಿಗೆ ಮುನ್ನೆಚ್ಚರಿಕೆಯೂ ಇದೆ.

ಮತ್ತೊಂದೆಡೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಮನುಷ್ಯನ ಹೃದಯದಲ್ಲಿ ಅನೇಕ ವಿಧದ ಸ್ಥಿತಿಗಳು ಉಂಟಾಗುತ್ತವೆ. ಕೊನೆಗೆ ಅಲ್ಲಾಹನು ಸಜ್ಜನರ ಆತ್ಮಗಳ ದೌರ್ಬಲ್ಯವನ್ನು ದೂರಮಾಡುತ್ತಾನೆ ಹಾಗೂ ಪರಿಶುದ್ಧತೆ ಮತ್ತು ಒಳಿತಿನ ಶಕ್ತಿಯನ್ನು ಕೊಡುಗೆಯಾಗಿ ನೀಡುತ್ತಾನೆ. ಆಗ ಅಲ್ಲಾಹನ ದೃಷ್ಟಿಯಲ್ಲಿ ಅನಿಷ್ಟಕರವಾದ ಎಲ್ಲ ಸಂಗತಿಗಳು ಅವನ ದೃಷ್ಟಿಯಲ್ಲೂ ಅನಿಷ್ಟಕರವಾಗುವುವು. ಅನಂತರ ಅವನಿಗೆ ಎಂತಹ ಶಕ್ತಿ ಲಭಿಸುವುದು ಎಂದರೆ, ಅದರ ನಂತರ ದೌರ್ಬಲ್ಯವಿರದು. ಎಂತಹ ಆವೇಶ ಲಭಿಸುತ್ತದೆ ಎಂದರೆ, ಅದರ ನಂತರ ಆಲಸ್ಯವಿರದು. ಎಂತಹ ದೇವಭಕ್ತಿ ಲಭಿಸುತ್ತದೆ ಎಂದರೆ ಅದರ ನಂತರ ಪಾಪವಿರದು. ಕರುಣಾಳುವಾದ ದೇವನು ಎಷ್ಟು ಸಂಪ್ರೀತನಾಗುತ್ತಾನೆ ಎಂದರೆ, ಅದರ

ನಂತರ ತಪ್ಪು ಕೃತ್ಯವಿರದು. ಆದರೆ ಈ ಅನುಗ್ರಹ ತಡವಾಗಿ ಲಭಿಸುವುದು. ಮೊದಮೊದಲಿಗೆ ಮನುಷ್ಯನು ತನ್ನ ದುರ್ಬಲತೆಯ ಕಾರಣದಿಂದ ಬಹಳಷ್ಟು ಎಡವಿ ಬೀಳುತ್ತಾನೆ ಮತ್ತು ಮೊದಲಿನಂತೆ ಆಗುತ್ತಾನೆ. ಆದರೆ ಮನುಷ್ಯನ ನಿಷ್ಠೆಯನ್ನು ನೋಡಿಕೊಂಡು ಸರ್ವಶಕ್ತನಾದ ಅಲ್ಲಾಹನು ತನ್ನ ಕಡೆಗೆ ಅವನನ್ನು ಎಳೆಯುತ್ತಾನೆ. **ವಲ್ಲಧೀನ ಜಾಹದೂ ಫೀನಾ ಲನಹ್‌ದಿಯನ್ನಹುಂ ಸುಬುಲನಾ** ಎಂಬ ವಚನದಲ್ಲಿ ಇದರ ಕಡೆಗೆ ಸೂಚನೆ ನೀಡಲಾಗಿದೆ. (ತಫ್ಸೀರ್ ಹಝ್ರತ್ ಮಸೀಹ್ ಮೌಊದ್(ಅ), ಸಂಪುಟ-3, ಪುಟ-626) ಎಂದರೆ ನಾವು ಅವರನ್ನು ದೇವಭಕ್ತಿ ಮತ್ತು ಸತ್ಯವಿಶ್ವಾಸದಲ್ಲಿ ನೆಲೆನಿಲ್ಲಿಸುವೆವು. ಖಂಡಿತವಾಗಿಯೂ ಪ್ರೇಮ ಮತ್ತು ದೇವಜ್ಞಾನದ ಮಾರ್ಗದ ಕಡೆಗೆ ಕೊಂಡುಹೋಗುವೆವು. ಅವರಿಗೆ ಸತ್ಕರ್ಮಗಳನ್ನು ಮಾಡಲು ಮತ್ತು ಪಾಪಗಳನ್ನು ಉಪೇಕ್ಷಿಸಲು ಶಕ್ತಿ ನೀಡುವೆವು.

ಮನುಷ್ಯನ ಸ್ಥಿತಿ ಯಾವಾಗಲೂ ಒಂದೇ ರೀತಿಯಾಗಿರುವುದಿಲ್ಲ. ಏರಿಳಿತ ಮನುಷ್ಯನ ಪ್ರಕೃತದಲ್ಲಿ ಉಂಟಾಗುತ್ತಿರುತ್ತದೆ. ಆದರೆ ಸಜ್ಜನರು ತಮ್ಮ ದುರ್ಬಲತೆಯ ಸ್ಥಿತಿಯಿಂದ ಪಾಠವನ್ನು ಕಲಿಯುತ್ತಾರೆ. ಪಶ್ಚಾತ್ತಾಪ ಮತ್ತು ಕ್ಷಮೆಯಾಚನೆ ಮಾಡುತ್ತಾರೆ. ಅವರು ಅಲ್ಲಾಹನ ಮುಂದೆ ಬಾಗುತ್ತಾರೆ. ತನ್ನ ದುರ್ಬಲತೆಯ ಬಗ್ಗೆ ನಾಚಿಕೆಪಟ್ಟು ಅಲ್ಲಾಹನ ಹುಡುಕಾಟದಲ್ಲಿ ಕಠಿಣ ಪ್ರಯತ್ನ ಮಾಡಲು ಎದ್ದು ನಿಲ್ಲುತ್ತಾರೆ. ಆಗ ಅಲ್ಲಾಹನ ಪ್ರೇಮ ಉಕ್ಕಿ ಹರಿಯುತ್ತದೆ. ಅವನ ಕ್ಷಮಿಸುವ ಗುಣ ಉಕ್ಕಿ ಬರುತ್ತದೆ. ಅಲ್ಲಾಹನು ತನ್ನ ದಾಸರ ಕಡೆಗೆ ಓಡಿ ಬರುತ್ತಾನೆ. ಅವನಿಗೆ ಪರಿಶುದ್ಧತೆ ಮತ್ತು ಒಳಿತಿನ ಶಕ್ತಿಯನ್ನು ಪ್ರದಾನ ಮಾಡುತ್ತಾನೆ. ಅಲ್ಲಾಹನ ಅನುಗ್ರಹದಿಂದ ಮನುಷ್ಯನಲ್ಲಿ ಪರಿಶುದ್ಧತೆ ಮತ್ತು ಒಳಿತಿನ ಶಕ್ತಿ ಉಂಟಾಗುವಾಗ ಮನುಷ್ಯನ ಪ್ರತಿಯೊಂದು ಕೃತ್ಯವು ಅಲ್ಲಾಹನ ಸಂಪ್ರೀತಿ ಗಳಿಸಲಿಕ್ಕಾಗಿ ಆಗುತ್ತದೆ. ಎಲ್ಲ ರೀತಿಯ ದುರ್ಬಲತೆ ಮತ್ತು ಆಲಸ್ಯದಿಂದ ಅವನು ಪರಿಶುದ್ಧನಾಗುತ್ತಾನೆ. ಅವನು ದೇವಭಕ್ತಿಯಲ್ಲಿ ನಡೆಯುವವನಾಗುತ್ತಾನೆ. ಅವನು ಪಾಪಗಳಿಂದ ಸುರಕ್ಷಿತನಾಗುತ್ತಾನೆ. ಅಲ್ಲಾಹನ ಎಂತಹ ಸಂಪ್ರೀತಿಯನ್ನು ಗಳಿಸುವವನಾಗುತ್ತಾನೆ ಎಂದರೆ, ಅನಂತರ ಅವನಿಂದ ಅಲ್ಲಾಹನ ಕೋಪಕ್ಕೆ ಕಾರಣವಾಗುವಂತಹ ತಪ್ಪುಗಳು ಆಗುವುದೇ ಇಲ್ಲ. ಆದರೆ ಈ ಅವಸ್ಥೆಯನ್ನು ಗಳಿಸಲಿಕ್ಕಾಗಿ ಸ್ಥಿರಚಿತ್ತತೆ ಮತ್ತು ಪರಿಶ್ರಮದ ಆವಶ್ಯಕತೆಯಿದೆ. ತಾತ್ಕಾಲಿಕವಾದ ಪ್ರಯತ್ನವಲ್ಲ, ಬದಲಾಗಿ ಸ್ಥಿರವಾದ ಪ್ರಯತ್ನಬೇಕು. ಆಗ ಈ ಸತ್ಕರ್ಮಗಳು ಮತ್ತು ದುಆ ಸ್ವೀಕಾರದ ದೃಶ್ಯಗಳು ಜೀವಿತದ ಭಾಗವಾಗುವುವು.

ಮತ್ತೊಂದೆಡೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಯಾರು ನಮ್ಮ ಮಾರ್ಗದಲ್ಲಿ ಕಠಿಣ ಪ್ರಯತ್ನ ಮಾಡುವರೋ ನಾವು ಅವರಿಗೆ ನಮ್ಮ ಮಾರ್ಗಗಳನ್ನು ತೋರಿಸುಕೊಡುವೆವು ಎಂದು ಅಲ್ಲಾಹನು ವಾಗ್ದಾನ ನೀಡಿದ್ದಾನೆ. ಮತ್ತೊಂದೆಡೆ "ನಮ್ಮನ್ನು ನೇರವಾದ ಮಾರ್ಗದಲ್ಲಿ ನಡೆಸು" ಎಂಬ ಪ್ರಾರ್ಥನೆಯನ್ನೂ ಕಲಿಸಿಕೊಟ್ಟನು. ಆದ್ದರಿಂದ ಇದನ್ನು ಮುಂದಿರಿಸಿಕೊಂಡು ಅಭಿವೃದ್ಧಿ ಹಾಗೂ ದಿವ್ಯದೃಷ್ಟಿ ಗಳಿಸಿದವರೊಂದಿಗೆ ಸೇರುವಂತಾಗಲು ಮನುಷ್ಯನು ನಮಾಝಿನಲ್ಲಿ ರೋದನದೊಂದಿಗೆ ಮತ್ತು ಅದನ್ನು ಗಳಿಸುವ ಆಶೆಯೊಂದಿಗೆ ದುಆ ಮಾಡಬೇಕು. ಈ ಲೋಕದಿಂದ ದಿವ್ಯದೃಷ್ಟಿ ಲಭಿಸದೇ ಹೋಗುವಂತಾಗದಿರಲಿ ಎಂದು ದುಆ ಮಾಡಬೇಕು.

ಒಟ್ಟಿನಲ್ಲಿ ಈ ಪದವಿಯನ್ನು ಗಳಿಸಲಿಕ್ಕಾಗಿ ನಮ್ಮನ್ನು ನೇರವಾದ ಮಾರ್ಗದಲ್ಲಿ ನಡೆಸು ಎಂಬ ದುಆವನ್ನು ಪದೇ ಪದೇ ಮಾಡಲೂ ಬೇಕು. ಖಾದಿಯಾನಿನ ಒಂದು ಘಟನೆಯನ್ನು ಒಬ್ಬರು ಹೀಗೆ ವರದಿ ಮಾಡಿರುವರು: ಹಝ್ರತ್ ಮಸೀಹ್ ಮೌಊದ್(ಅ)ರ ಸಹಾಬಿಯೊಬ್ಬರು ಮುಬಾರಕ್ ಮಸೀದಿಯ ಒಂದು ಮೂಲೆಯಲ್ಲಿ ನಿಂತುಕೊಂಡು ನಮಾಝಿನಲ್ಲಿ ಬಹಳ ಭಾವುಕರಾಗಿ ಮತ್ತು ದೇವಭಯದಿಂದ ಕೈಯನ್ನು ಕಟ್ಟಿಕೊಂಡು ದುಆ ಮಾಡುತ್ತಿದ್ದರು. ಗಮನವಿಟ್ಟು ಆಲಿಸಿದಾಗ ಅವರು **ಇಹ್‌ದಿನಸ್ಸಿರಾತಲ್ ಮುಸ್ತಖೀಂ** ಎಂಬ ವಚನವನ್ನು ಪದೇ ಪದೇ ಓದುತ್ತಿರುವುದಾಗಿ ತಿಳಿದುಬಂತು. ಮನುಷ್ಯನು ತನ್ನ ಸನ್ಮಾರ್ಗಕ್ಕಾಗಿ ಬಹಳವಾಗಿ ಮಾಡಬೇಕಾದ ಪ್ರಾರ್ಥನೆಯಾಗಿದೆ ಇದು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಯಾರು ಸತ್ಯಹೃದಯದೊಂದಿಗೆ ಮತ್ತು ಸದುದ್ದೇಶದೊಂದಿಗೆ ಅಲ್ಲಾಹನ ಮಾರ್ಗವನ್ನು ಹುಡುಕುತ್ತಾನೋ ಅವನಗಾಗಿ ಅಲ್ಲಾಹನು ಸನ್ಮಾರ್ಗ ಮತ್ತು ದಿವ್ಯಜ್ಞಾನದ ಮಾರ್ಗಗಳನ್ನು ತೆರೆದುಕೊಡುವನು ಎಂಬುದು ಅಲ್ಲಾಹನ ವಾಗ್ದಾನವಾಗಿದೆ. ಅಲ್ಲಾಹನು ಸ್ವತಃ ಹೀಗೆ ಹೇಳಿದ್ದಾನೆ: **ವಲ್ಲಧೀನ ಜಾಹದೂ ಫೀನಾ ಲನಹ್‌ದಿಯನ್ನಹುಂ ಸುಬುಲನಾ**. ಎಂದರೆ, ಯಾರು ನಮ್ಮನ್ನು ಭೇಟಿಯಾಗಲು ಪರಿಶ್ರಮಿಸುತ್ತಾರೋ ಅವರಿಗೆ ನಾವು ಖಂಡಿತವಾಗಿಯೂ ನಮ್ಮ ಮಾರ್ಗಗಳನ್ನು ತೋರಿಸಿ ಕೊಡುವೆವು. ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಅಲ್ಲಾಹನ ಶೋಧನೆಯನ್ನು ತನ್ನ ಉದ್ದೇಶವಾಗಿಟ್ಟುಕೊಂಡು ಅವರು ಪ್ರಯತ್ನ ಮಾಡುತ್ತಾರೆ. ಯಾವುದೇ ಲೌಕಿಕವಾದ ಉದ್ದೇಶ ಅದರಲ್ಲಿ ಇರುವುದಿಲ್ಲ. ಆದರೆ ಯಾರಾದರೂ ಅಪಹಾಸ್ಯ ಮತ್ತು ಪರೀಕ್ಷಣೆ ಎಂಬ ರೀತಿಯಲ್ಲಿ ಹೀಗೆ ಮಾಡುವುದಾದರೆ, ಅವನು ದೌರ್ಭಾಗ್ಯನಾಗುವನು. ಪರಿಶುದ್ಧವಾದ ಉದ್ದೇಶದೊಂದಿಗೆ ಪ್ರಯತ್ನ ಮತ್ತು ದುಆ ಮಾಡಿದರೆ ನಾವು ಅಲ್ಲಾಹನನ್ನು ಕ್ಷಮಿಸುವವನಾಗಿಯೂ ಕರುಣೆದೋರುವವನಾಗಿಯೂ ಕಾಣುವೆವು. ಆದರೆ ಯಾರಾದರೂ ಅಲ್ಲಾಹನ ಪರಿವೆ ಮಾಡದಿದ್ದರೆ, ಅಲ್ಲಾಹನಿಗೂ ನಮ್ಮ ಆವಶ್ಯಕತೆಯಿಲ್ಲ. (ಮಲ್‌ಫೂಝಾತ್, ಸಂಪುಟ-6, ಪುಟ-439, 1984) ಅಲ್ಲಾಹನಿಗೂ ನಮ್ಮ ಪರಿವೆ ಇರುವುದಿಲ್ಲ.

ಮತ್ತೊಂದೆಡೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಲೋಕದಲ್ಲಿ ನಡೆಯುವ ಎಲ್ಲ ಕೆಲಸಗಳಿಗಾಗಿ ಮೊದಲು ಮನುಷ್ಯನು ಏನಾದರೂ ಮಾಡಬೇಕಾಗುತ್ತದೆ. ಮನುಷ್ಯನು ಅದಕ್ಕಾಗಿ ಕೈಕಾಲುಗಳನ್ನು ಚಲಾಯಿಸುವಾಗ ಅಲ್ಲಾಹನು ಕೂಡ ಅನುಗ್ರಹಿಸುತ್ತಾನೆ. ಅದೇ ರೀತಿಯಲ್ಲಿ, ಅಲ್ಲಾಹನ ಮಾರ್ಗದಲ್ಲಿ ಕಠಿಣ ಪ್ರಯತ್ನ ಮಾಡುವವರೇ ಶ್ರೇಷ್ಠತೆಯನ್ನು ಗಳಿಸುತ್ತಾರೆ. ಅಲ್ಲಾಹನನ್ನು ಗಳಿಸಲಿಕ್ಕಾಗಿ ಪರಿಶ್ರಮದ ಆವಶ್ಯಕತೆಯಿದೆ. ಪ್ರಯತ್ನವೇ ಯಶಸ್ಸಿನ ಮಾರ್ಗವಾಗಿದೆ. (ಮಲ್‌ಫೂಝಾತ್, ಸಂಪುಟ-7, ಪುಟ-224, 1984)

ಲೌಕಿಕವಾದ ಕಾರ್ಯಗಳಿಗಾಗಿ ನಾವು ಅತಿಯಾದ ಪ್ರಯತ್ನಗಳನ್ನು ಮಾಡುವುದಾದರೆ, ಅಲ್ಲಾಹನನ್ನು ಗಳಿಸುವ ಮಾರ್ಗಕ್ಕಾಗಿ ಅತಿಯಾದ ಪ್ರಯತ್ನ ಏಕೆ ಮಾಡುವುದಿಲ್ಲ. ನಾವು ಅಲ್ಪವಾಗಿ ನಾಲಗೆಯಿಂದ ದುಆ ಮಾಡಿದ ಕೂಡಲೇ ಅಲ್ಲಾಹನನ್ನು ಲಭಿಸಬೇಕು ಮತ್ತು ದುಆ ಸ್ವೀಕಾರವಾಗಬೇಕು ಎಂದು ಏಕೆ ಬಯಸಿಕೊಳ್ಳುತ್ತೇವೆ. ಯಾರು ತಮ್ಮ ಪ್ರಾರ್ಥನೆಗಳು ಸ್ವೀಕಾರವಾಗುವುದಿಲ್ಲವೆಂದು ಹೇಳುತ್ತಾರೋ ಅವರು ಸ್ವತಃ ತಮ್ಮನ್ನು ಪರಿಶೋಧಿಸಲಿ. ಅಲ್ಲಾಹನನ್ನು ಲಭಿಸಲು ಸುಲಭ ಮಾರ್ಗವಿರುವುದಾಗಿ ಭಾವಿಸುವುದು ಆದರೆ ಲೌಕಿಕವಾದ ಸಂಗತಿಗಳು ಲಭಿಸಲು ಪರಿಶ್ರಮಬೇಕೆಂದು ಭಾವಿಸುವುದು ಸರಿಯಲ್ಲ. ಪ್ರಯತ್ನ ಮಾಡಬೇಕೆಂಬ ತತ್ವ ಎಲ್ಲ ಕಡೆ ಒಂದೇ ಆಗಿರುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಯಾರು ಅಲ್ಲಾಹನ ಮಾರ್ಗದಲ್ಲಿ ಪ್ರಯತ್ನಪಡುತ್ತಾರೋ ಅವರು ಕೊನೆಗೆ ಸನ್ಮಾರ್ಗವನ್ನು ಗಳಿಸುತ್ತಾರೆ. ಯಾವ ರೀತಿಯಲ್ಲಿ ಪ್ರಯತ್ನವಿಲ್ಲದೇ ಮತ್ತು ನೀರುಣಿಸದೇ ಮಣ್ಣಿನಲ್ಲಿ ಬಿತ್ತಲಾದ ಬೀಜವು ಫಲಪ್ರದವಾಗದೇ ನಾಶವಾಗುವುದೋ ಅದೇ ರೀತಿಯಲ್ಲಿ ನಮಗೆ ಸಹಾಯನೀಡು ಎಂದು ಪ್ರಾರ್ಥಿಸದೇ ಮತ್ತು ದುಆಗಳನ್ನು ಪ್ರತಿದಿನ ಮಾಡದೇ ದೈವಿಕ ಕೃಪೆ ವರ್ಷಿಸದು. ಅಲ್ಲಾಹನ ಸಹಾಯವಿಲ್ಲದೇ ಬದಲಾವಣೆ ಅಸಾಧ್ಯ. (ಮಲ್‌ಫೂಝಾತ್, ಸಂಪುಟ-7, ಪುಟ-225, 1984)

ಇದು ಪ್ರಕೃತಿ ನಿಯಮವಾಗಿದೆ. ಅಲ್ಲಾಹನನ್ನು ಗಳಿಸಲಿಕ್ಕಾಗಿಯೂ ಇದು ಆವಶ್ಯಕ. ಬೀಜವನ್ನು ಬಿತ್ತಿ ಒಬ್ಬ ರೈತ ಸುಮ್ಮನೆ ಕುಳಿತುಕೊಳ್ಳುವುದಿಲ್ಲ. ಅದೇ ರೀತಿಯಲ್ಲಿ ಮನುಷ್ಯನು ಕೇವಲ ವಿಶ್ವಾಸ ಕೈಗೊಂಡು ಸುಮ್ಮನೆ ಕುಳಿತುಕೊಂಡರೆ ಏನೂ ಆಗದು. ಬದಲಾಗಿ ಪ್ರಯತ್ನ ಮಾಡಬೇಕಾಗುವುದು. ತನ್ನ ವಿಶ್ವಾಸವೆಂಬ ಗಿಡದ ಪಾಲನೆ ಪೋಷಣೆ ಮಾಡಬೇಕಾಗುವುದು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಯಾರು ಅಲ್ಲಾಹನ ಕಡೆಗೆ ಬಾಗುತ್ತಾನೋ ಅಲ್ಲಾಹನು ಕೂಡ ಅವನ ಕಡೆಗೆ ಬಾಗುವನು. ಆದರೆ ತನಗೆ ಸಾಧ್ಯವಾಗುವಷ್ಟು ಪ್ರಯತ್ನ ಮಾಡಬೇಕಾಗಿದೆ. ಅದರಲ್ಲಿ ಕೊರತೆ ಮಾಡಬಾರದು. ಅವನ ಪ್ರಯತ್ನ ಅದರ ಮಿತಿಯ ತನಕ ತಲುಪುವಾಗ ಅವನು ಅಲ್ಲಾಹನ ಪ್ರಕಾಶವನ್ನು ಕಾಣುವನು. "ಯಾರು ನಮ್ಮನ್ನು ಭೇಟಿಯಾಗಲು ಪರಿಶ್ರಮಿಸುತ್ತಾರೋ ಅವರಿಗೆ ನಾವು ಖಂಡಿತವಾಗಿಯೂ ನಮ್ಮ ಮಾರ್ಗಗಳನ್ನು ತೋರಿಸಿ ಕೊಡುವೆವು." ಎಂಬ ವಚನದಲ್ಲಿ ಇದರ ಕಡೆ ಸೂಚನೆಯಿದೆ. ಅವನು ಮಾಡಬೇಕಾದಷ್ಟು ಪ್ರಯತ್ನವನ್ನು ಅವನು ಮಾಡಬೇಕು. ಹತ್ತು ಅಡಿಯಷ್ಟು ಕೆಳಗೆ ಅಗಿಯುವುದರಿಂದ ನೀರು ಲಭಿಸುವುದು ಎಂದಾದರೆ, ಅವನು ಎರಡು ಅಡಿಯಷ್ಟು ಅಗೆದು ಆಯಾಸಗೊಳ್ಳಬಾರದು. ಎಲ್ಲ ಕೆಲಸದಲ್ಲೂ ಯಶಸ್ಸಿನ ಸೂತ್ರ ಇದೇ ಆಗಿದೆ. ಧೈರ್ಯಗುಂದಬಾರದು.

ಯಾರಾದರೂ ಪೂರ್ಣವಾಗಿ ದುಆ ಮತ್ತು ಆತ್ಮ ಪರಿಶುದ್ಧಿಯನ್ನು ಮಾಡಿಕೊಂಡರೆ ಪವಿತ್ರ ಖುರ್‌ಆನ್ ಹೇಳಿದ ಎಲ್ಲ ವಾಗ್ದಾನಗಳು ಅವನ ಪರವಾಗಿ ಈಡೇರುವುದು ಎಂಬುದು ಈ ಸಮುದಾಯಕ್ಕಿರುವ ವಾಗ್ದಾನವಾಗಿದೆ. ಆದರೆ ಅದಕ್ಕೆ ವಿರುದ್ಧವಾಗಿ ಮಾಡುವವನಿಗೆ ಅದು ಸಿಗದು. ಏಕೆಂದರೆ ಅಲ್ಲಾಹನು ಅಭಿಮಾನವುಳ್ಳವನಾಗಿದ್ದಾನೆ. ಅಲ್ಲಾಹನು ಅವನ ಕಡೆಗೆ ಹೋಗಲಿರುವ ಮಾರ್ಗವನ್ನು ಖಂಡಿತ ಇರಿಸಿದ್ದಾನೆ. ಆದರೆ ಅದರ ಬಾಗಿಲು ಅಗಲವುಳ್ಳದಲ್ಲ. ಯಾರು ಕಹಿಯಾದ ಪಾನೀಯವನ್ನು ಕುಡಿಯಲು ತಯಾರಾಗುತ್ತಾನೋ ಅವನೇ ಅದರಲ್ಲಿ ಪ್ರವೇಶಿಸುತ್ತಾನೆ. ಅದಕ್ಕಾಗಿ ಪರಿಶ್ರಮಪಡಬೇಕಾಗುವುದು. ಜನರು ಲೋಕದ ಚಿಂತೆಯಲ್ಲಿ ನೋವನ್ನು ಸಹಿಸಿಕೊಳ್ಳುತ್ತಾರೆ. ಎಲ್ಲಿಯ ವರೆಗೆ ಎಂದರೆ, ಕೆಲವರು ಅದರಲ್ಲೇ

ನಾಶವಾಗುತ್ತಾರೆ. ಆದರೆ ಅಲ್ಲಾಹನಿಗಾಗಿ ಒಂದು ಮುಳ್ಳು ಚುಚ್ಚುವಷ್ಟು ನೋವನ್ನು ಕೂಡ ಸಹಿಸಲು ಇಷ್ಟಪಡುವುದಿಲ್ಲ. ಎಲ್ಲಿಯ ವರೆಗೆ ದಾಸನ ಕಡೆಯಿಂದ ಸತ್ಯಸಂಧತೆ, ಸಹನೆ ಮತ್ತು ಪ್ರಾಮಾಣಿಕತೆಯ ಲಕ್ಷಣಗಳು ಪ್ರಕಟವಾಗುವುದಿಲ್ಲವೋ ಅಲ್ಲಿಯ ವರೆಗೂ ಅಲ್ಲಾಹನ ಕಡೆಯಿಂದಲೂ ಕೃಪೆಯ ಲಕ್ಷಣಗಳು ಪ್ರಕಟವಾಗಲಾರದು. (ಮಲ್‌ಫ಼ೂರ್‌ಖಾತ್, ಸಂಪುಟ–7, ಪುಟ–291, 1984)

ಹರ್ಝ಼ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನೆನಪಿಡಿರಿ, ಸತ್ಕೃತ್ಯ ಮತ್ತು ಸತ್ಕರ್ಮಗಳಿಲ್ಲದ ವಿಶ್ವಾಸವು ನೀರಿಲ್ಲದ ತೋಟದಂತಾಗಿದೆ. ಗಿಡವನ್ನು ನೆಟ್ಟ ನಂತರ ಅದರ ಮಾಲಿಕ ಅದಕ್ಕೆ ನೀರುಣಿಸುವುದರ ಕಡೆಗೆ ಗಮನವಹಿಸದಿದ್ದರೆ ಒಂದು ದಿನ ಅದು ಒಣಗಿ ಹೋಗುವುದು. ವಿಶ್ವಾಸದ ಸ್ಥಿತಿಯೂ ಇದೇ ರೀತಿಯಾಗಿದೆ. ಅಲ್ಪ ಸ್ವಲ್ಪ ಕೆಲಸ ಮಾಡಿದರೆ ಸಾಕಾಗದು. ಅವನ ಮಾರ್ಗದಲ್ಲಿ ಹಿರಿದಾದ ಕಠಿಣ ಪ್ರಯತ್ನದ ಆವಶ್ಯಕತೆಯಿದೆ. (ತಫ್ಸೀರ್ ಹರ್ಝ಼ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್, ಸಂಪುಟ–3, ಪುಟ–631)

ಅಲ್ಲಾಹನನ್ನು ಕರೆಯುವವನು ಅಲ್ಲಾಹನನ್ನು ನಂಬಬೇಕು ಎಂದು ಅಲ್ಲಾಹನು ಹೇಳಿದ್ದಾನೆ. ಎಂದರೆ ಅಲ್ಲಾಹನಿಗೆ ಸಲ್ಲಬೇಕಾದ ಮತ್ತು ಸೃಷ್ಟಿಗಳಿಗೆ ಸಲ್ಲಬೇಕಾದ ಕರ್ತವ್ಯಗಳನ್ನು ಈಡೇರಿಸುವುದರ ಮೂಲಕ ಅಲ್ಲಾಹನ ಮೇಲೆ ಇರುವ ವಿಶ್ವಾಸದ ಹಕ್ಕನ್ನು ಈಡೇರಿಸಬೇಕು. ಸತ್ಯವಿಶ್ವಾಸದ ತೋಟದ ಪಾಲನೆ ಪೋಷನೆ ಮಾಡಲು ಮತ್ತು ಅದರ ಮೇಲ್ನೋಟವಹಿಸಲು ಅಲ್ಲಾಹನು ತನ್ನ ದಾಸರೊಡನೆ ಹೇಳುತ್ತಾನೆ. ನಮ್ಮ ಮನೆಗಳಲ್ಲಿ ಇರುವ ಗಿಡಗಳನ್ನು ನಾವು ನಿಯತವಾಗಿ ಮೇಲ್ನೋಟ ವಹಿಸದಿದ್ದರೆ, ಅವುಗಳು ಒಣಗಿ ಹೋಗುವುದನ್ನು ನಾವು ನೋಡುತ್ತೇವೆ. ಹೀಗಿರುವಾಗ ಸತ್ಯವಿಶ್ವಾಸದ ತೋಟವನ್ನು ಮೇಲ್ನೋಟವಿಲ್ಲದೇ ಬಿಟ್ಟುಬಿಡುವುದು ಹೇಗೆ? ಹರ್ಝ಼ರತ್ ಮಸೀಹ್ ಮೌಊದ್(ಅ) ಮತ್ತೊಂದು ರೀತಿಯಲ್ಲಿ ಹೀಗೆ ಹೇಳುತ್ತಾರೆ: ನಮ್ಮ ಮಾರ್ಗದಲ್ಲಿ ಪ್ರಯತ್ನಿಸುವವನು ನೇರವಾದ ಮಾರ್ಗವನ್ನು ಪಡೆಯುವವನು ಎಂದು ಅಲ್ಲಾಹನು ಹೇಳುತ್ತಾನೆ. ಅದರ ಅರ್ಥವೇನೆಂದರೆ, ಈ ಮಾರ್ಗದಲ್ಲಿ ಪ್ರವಾದಿಯೊಂದಿಗೆ ಸೇರಿಕೊಂಡು ಕಠಿಣಪ್ರಯತ್ನ ಮಾಡಬೇಕಾಗುವುದು. ಒಂದೆರಡು ಗಂಟೆಗಳ ನಂತರ ಓಡಿಹೋಗುವುದು ಪರಿಶ್ರಮಿಯ ಕೆಲಸವಲ್ಲ. ಬದಲಾಗಿ ಜೀವಕೊಡಲು ತಯಾರಾಗುವುದು ಅವನ ಕೆಲಸವಾಗಿದೆ. ಆದ್ದರಿಂದ ದೇವಭಕ್ತನ ಲಕ್ಷಣ ಸ್ಥಿರಚಿತ್ತತೆಯಾಗಿದೆ. (ಮಲ್‌ಫೂಝಾತ್, ಸಂಪುಟ–1, ಪುಟ–25, 1984)

ನಾವು ಲೌಕಿಕತೆಗಿಂತ ದೀನಿಗೆ ಪ್ರಾಮುಖ್ಯತೆ ಕೊಡುವೆವು ಎಂದು ಪ್ರತಿಜ್ಞೆ ಮಾಡಿರುವಾಗ, ಈ ಪ್ರತಿಜ್ಞೆಯಲ್ಲಿ ನೆಲೆನಿಲ್ಲಲಿಕ್ಕಾಗಿ ಧರ್ಮವು ನಮ್ಮಿಂದ ಏನನ್ನು ಆವಶ್ಯಪಡುತ್ತದೆ ಎಂದು ನೋಡಬೇಕಾದ ಆವಶ್ಯಕತೆಯಿದೆ. ಯಾವುದಕ್ಕೆ ಆದ್ಯತೆ ಕೊಡಬೇಕು ಮತ್ತು ಯಾವುದರ ಮೇಲೆ ಸ್ಥಿರವಾಗಿ ನೆಲೆನಿಲ್ಲಬೇಕು ಎಂದು ನೋಡಬೇಕಾಗಿದೆ.

ಮತ್ತೆ ಹರ್ಝ಼ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ಯಾರು ಅಲ್ಲಾಹನನ್ನು ಮಾತ್ರ ಭಯಪಟ್ಟುಕೊಂಡು ಅವನ ಮಾರ್ಗದ ಶೋಧನೆಯಲ್ಲಿ ಪ್ರಯತ್ನಮಾಡುತ್ತಾನೋ, ಕಷ್ಟತೆಗಳಿಂದ ಪಾರಾಗಲು ದುಆ ಮಾಡುತ್ತಾನೋ ಅವನಿಗಾಗಿ ಅಲ್ಲಾಹನು ತನ್ನ ನಿಯಮ ಪ್ರಕಾರ ಸ್ವತಃ ಕೈಹಿಡಿದುಕೊಂಡು ತನ್ನ ಮಾರ್ಗವನ್ನು ತೋರಿಸಿಕೊಡುತ್ತಾನೆ ಮತ್ತು ಅವನಿಗೆ ಮನಸ್ಸಮಾಧಾನ ನೀಡುತ್ತಾನೆ. ಹೃದಯವು ಅಂಧಕಾರಮಯವಾಗಿದ್ದು, ದುಆ ಮಾಡುವುದು ಕಷ್ಟಕರವಾಗಿದ್ದು, ವಿಶ್ವಾಸವು ಶಿರ್ಕ್ ಮತ್ತು ದುರಾಚಾರಗಳಿಂದ ಕೂಡಿದ್ದು ಆಗಿದ್ದರೆ, ಅಂತಹವನ ದುಆ ಎಂತದ್ದು? ಅವನ ಪ್ರಾರ್ಥನೆಯಿಂದ ಉತ್ತಮ ಪರಿಣಾಮ ಉಂಟಾಗಲು ಹೇಗೆ ಸಾಧ್ಯ? (ತಫ್ಸೀರೆ ಹರ್ಝ಼ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್, ಸಂಪುಟ–3, ಪುಟ–632)

ನಾವು ಇಂತಹ ಚಿಂತೆ ಮತ್ತು ಯೋಚನೆಯಿಂದ ಅಲ್ಲಾಹನ ಮಾರ್ಗದಲ್ಲಿ ಶೋಧನೆ ನಡೆಸುತ್ತಿದ್ದೇವೆಯೋ? ನಮ್ಮ ಹೃದಯಗಳು ಅಲ್ಲಾಹೇತರ ವಸ್ತುಗಳಿಂದ ಪೂರ್ಣವಾಗಿಯೂ ಖಾಲಿಯಾಗಿದೆಯೇ ಎಂದು ಪರಿಶೋಧನೆ ನಡೆಸಬೇಕಾಗಿದೆ.

ಪಶ್ಚಾತ್ತಾಪ ಮತ್ತು ಕ್ಷಮೆಯಾಚನೆಯ ಕಡೆಗೆ ಗಮನ ಸೆಳೆಯುತ್ತಾ ಹರ್ಝ಼ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಪಶ್ಚಾತ್ತಾಪ ಮತ್ತು ಕ್ಷಮೆಯಾಚನೆ ಅಲ್ಲಾಹನನ್ನು ಗಳಿಸಲು ಇರುವ ಮಾರ್ಗವಾಗಿದೆ. ಅಲ್ಲಾಹನು ಹೇಳುತ್ತಾನೆ. **ವಲ್ಲಧೀನ ಜಾಹದೂ ಫೀನಾ ಲನಹ್‌ದಿಯನ್ನಹುಂ ಸುಬುಲನಾ.** ಪರಿಪೂರ್ಣ ಪರಿಶ್ರಮದಿಂದ ಅವನ ಮಾರ್ಗದಲ್ಲಿ ನಡೆಯುತ್ತಾ ಹೋಗು. ತಲುಪಬೇಕಾದ ಗುರಿಯನ್ನು ತಲುಪುವಿರಿ. ಅಲ್ಲಾಹನಿಗೆ ಯಾರೊಂದಿಗೂ ಜಿಪುಣತೆ ತೋರಿಸಬೇಕಾದ ಆವಶ್ಯಕತೆಯಿಲ್ಲ. (ಮಲ್‌ಫ಼ೂರ್‌ಖಾತ್, ಸಂಪುಟ–10, ಪುಟ–107)

ಮತ್ತೆ ಹೇಳಿದರು: ಸಹಾಬಿಯರ ಜೀವಿತವನ್ನು ನೋಡಿರಿ. ಅವರು ಕೇವಲ ಮಾಮೂಲಿ ನಮಾಝ಼್‌ಗಳಿಂದಲೇ ಆ ಉನ್ನತ ಪದವಿಗಳನ್ನು ಗಳಿಸಿದ್ದರೇ? ಅಲ್ಲ, ಬದಲಾಗಿ ಅವರು ಅಲ್ಲಾಹನ ಸಂಪ್ರೀತಿಗಾಗಿ ತಮ್ಮ ಜೀವಗಳ ಕೂಡ ಪರಿವೆ ಮಾಡಲಿಲ್ಲ. ಆಡುಕುರಿಗಳ ಹಾಗೆ ಬಲಿದಾನವಾದರು. ಅಷ್ಟನ್ನು ಮಾಡಿದಾಗಲೇ ಅವರು ಆ ಸ್ಥಾನವನ್ನು ಗಳಿಸಿದ್ದರು. ಒಂದೇ ಒಂದು ಮಂತ್ರವನ್ನು ಓದಿಕೊಂಡು ಉನ್ನತ ಪದವಿ ಗಳಿಸಬೇಕು ಮತ್ತು ಅಲ್ಲಾಹನ ಸನ್ನಿಧಿಗೆ ತಲುಪಬೇಕು ಎಂದು ಅನೇಕರು ಬಯಸುವುದಾಗಿ ನಾವು ನೋಡುತ್ತೇವೆ. ಇದು ಸಾಧ್ಯವಲ್ಲ.

ಅಲ್ಲಾಹನು ಕರುಣಾಳು ಮತ್ತು ದಯಾಳು ಆಗಿರುವನು. ಆದರೆ ಪರಿಪೂರ್ಣ ವಿಶ್ವಾಸಿಯಾಗಲು ಅಲ್ಲಾಹನು ನಿಬಂಧನೆಯನ್ನು ಕೂಡ ಇರಿಸಿದ್ದಾನೆ. ಅದೇನೆಂದರೆ, ಮನುಷ್ಯನು ಅಲ್ಲಾಹನ ಮಾರ್ಗದಲ್ಲಿ ಕಠಿಣ ಪ್ರಯತ್ನ ಮಾಡಬೇಕು. ಆಗ ಅಲ್ಲಾಹನು ಅವನ ಸ್ಥಾನವನ್ನು ಇನ್ನೂ ಉನ್ನತಗೊಳಿಸುತ್ತಾನೆ. ಆಗ ಅವನು ದುಆ ಸ್ವೀಕಾರದ ದೃಶ್ಯಗಳನ್ನು ಕಾಣುವನು. ಅಲ್ಲಾಹನ ದಯೆ ಮತ್ತು ಕೃಪೆಯ ದೃಶ್ಯಗಳನ್ನು ಮೊದಲಿಗಿಂತ ಹೆಚ್ಚಾಗಿ ಕಾಣುವನು. ಸಹಾಬರು ನೋಡಿದಂತಹ ದೃಶ್ಯಗಳನ್ನು ಕಾಣುವನು. ಅವರು ಅಲ್ಲಾಹನ ಪ್ರೇಮದಲ್ಲಿ ಎಷ್ಟು ಮುಳುಗಿದ್ದರು ಎಂದರೆ, ಅದರ ಉದಾಹರಣೆ ಕೂಡ ಬೇರೆಲ್ಲೂ ಸಿಗುವುದಿಲ್ಲ. ಅವರು ಅಲ್ಲಾಹನ ಮಾರ್ಗದಲ್ಲಿ ಹೊಡೆಯಲ್ಪಟ್ಟರು. ಆದರೆ ಅನಂತರ ಅವರು ಸ್ವರ್ಗದ ಮತ್ತು ಅಲ್ಲಾಹನ ಸಂಪ್ರೀತಿಯ ಸುವಾರ್ತೆಯನ್ನು ಪಡೆಯುವವರಾದರು.

ಯಾರು ಅಲ್ಲಾಹನಲ್ಲಿ ಲೀನರಾಗಿ ಅಲ್ಲಾಹನನ್ನು ಗಳಿಸಲಿಕ್ಕಾಗಿ ತಳಮಳ ಮತ್ತು ನಮ್ರತೆಯಿಂದ ಪ್ರಯತ್ನಿಸುತ್ತಾರೋ ಅವರ ಪ್ರಯತ್ನ ವ್ಯರ್ಥವಾಗದು. ಅವರಿಗೆ ಖಂಡಿತ ಸನ್ಮಾರ್ಗ ತೋರಿಸಿಕೊಡಲಾಗುವುದು. ಯಾರು ಸತ್ಯಸಂಧತೆ ಮತ್ತು ಸದುದ್ದೇಶದಿಂದ ಅಲ್ಲಾಹನ ಕಡೆಗೆ ಹೆಜ್ಜೆ ಹಾಕುತ್ತಾರೋ ಅಲ್ಲಾಹನು ಅವನ ಕಡೆಗೆ ಮಾರ್ಗ ತೋರಿಸಿಕೊಡಲಿಕ್ಕಾಗಿ ಮುಂದೆ ಬರುವನು. (ಮಲ್‌ಫೂಝಾತ್, ಸಂಪುಟ–10, ಪುಟ–284, 1984)

ಹರ್ಝ಼ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ತನ್ನ ಆತ್ಮವನ್ನು ಪರಿವರ್ತನೆಗೊಳಿಸಲು ಪ್ರಯತ್ನಪಡಿರಿ. ನಮಾಝಿನಲ್ಲಿ ದುಆ ಮಾಡಿರಿ. ದಾನಧರ್ಮಗಳು ಮತ್ತು ಇತರ ಎಲ್ಲ ಉಪಾಯಗಳಿಂದ ಅಲ್ಲಾಹನ ಮಾರ್ಗದಲ್ಲಿ ಪ್ರಯತ್ನ ಮಾಡುವವರಲ್ಲಿ ಸೇರಿರಿ. ಯಾವ ರೀತಿಯಲ್ಲಿ ರೋಗಿಯೂ ಡಾಕ್ಟರಿನ ಬಳಿಗೆ ಹೋಗಿ ಮಾತ್ರೆ ಮತ್ತು ಚಿಕಿತ್ಸೆಗಳನ್ನು ಮಾಡಿಕೊಂಡು ರೋಗಶಮನ ಮಾಡಿಕೊಳ್ಳುತ್ತಾನೋ ಮತ್ತು ಎಲ್ಲ ರೀತಿಯ ಉಪಾಯಗಳನ್ನು ಮಾಡಿಕೊಳ್ಳುತ್ತಾನೋ ಅದೇ ರೀತಿಯಲ್ಲಿ ಆತ್ಮದ ರೋಗಗಳನ್ನು ದೂರಮಾಡಲು ಎಲ್ಲ ರೀತಿಯ ಪ್ರಯತ್ನವನ್ನು ಮಾಡಬೇಕು. ಕೇವಲ ಬಾಯಿಮಾತಿನಿಂದಲ್ಲ. ಬದಲಾಗಿ ಪ್ರಯತ್ನದ ಯಾವೆಲ್ಲ ಮಾರ್ಗಗಳನ್ನು ಅಲ್ಲಾಹನು ಹೇಳಿರುವನೋ ಅದನ್ನೆಲ್ಲ ಮಾಡಬೇಕು. (ಮಲ್‌ಫೂಝಾತ್, ಸಂಪುಟ–8, ಪುಟ–188, 1984) ಈ ರೀತಿಯಿಂದ ಅಲ್ಲಾಹನನ್ನು ಗಳಿಸಲಿಕ್ಕಿರುವ ಮಾರ್ಗಗಳು ತೆರೆಯುತ್ತಾ ಹೋಗುವುವು. ದುಆದ ಕಡೆ ಗಮನ ಸೆಳೆಯುತ್ತಾ ಹರ್ಝ಼ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಅನೇಕರು ದುಆವನ್ನು ಒಂದು ಮಾಮೂಲಿ ಸಂಗತಿಯೆಂದು ಭಾವಿಸುತ್ತಾರೆ. ಮಾಮೂಲಿಯಾಗಿ ನಮಾಝ಼್ ಮಾಡಿ, ಕೈಯನ್ನು ಎತ್ತಿ ಬಾಯಿಗೆ ಬಂದದ್ದನ್ನು ಹೇಳುವುದು ದುಆ ಅಲ್ಲ. ಇಂತಹ ದುಆದಿಂದ ಯಾವುದೇ ಪ್ರಯೋಜನವಿಲ್ಲ. ಏಕೆಂದರೆ, ಇಂತಹ ದುಆ ಕೇವಲ ಒಂದು ಮಂತ್ರದಂತಾಗಿರುತ್ತದೆ. ಅದರಲ್ಲಿ ನಮ್ಮ ಹೃದಯ ಜೊತೆಗೆ ಇರುವುದಿಲ್ಲ. ಅದರಲ್ಲಿ ಅಲ್ಲಾಹನ ಶಕ್ತಿ ಸಾಮರ್ಥ್ಯದ ಬಗ್ಗೆ ನಂಬಿಕೆ ಇರುವುದಿಲ್ಲ. ನೆನಪಿಡಿರಿ, ದುಆ ಒಂದು ಮರಣವಾಗಿದೆ. ಯಾವ ರೀತಿಯಲ್ಲಿ ಮರಣದ ಸಮಯದಲ್ಲಿ ಬೇಗುದಿ ಮತ್ತು ತಳಮಳವಿರುತ್ತದೋ ಅದೇ ರೀತಿಯಲ್ಲಿ ದುಆಗಾಗಿಯೂ ಅಂತಹದ್ದೇ ತಳಮಳ ಮತ್ತು ಆವೇಶ ಇರಬೇಕಾದದ್ದು ಆವಶ್ಯಕ. ಆದ್ದರಿಂದ ದುಆದಲ್ಲಿ ತಳಮಳ ಮತ್ತು ವಿನಮ್ರತೆ ಇಲ್ಲದಿದ್ದರೆ ಏನೂ ಆಗದು. ಆದ್ದರಿಂದ ರಾತ್ರಿ ಸಮಯದಲ್ಲಿ ಎದ್ದುಕೊಂಡು ಅತ್ಯಂತ ವಿನಮ್ರತೆ, ರೋದನ ಮತ್ತು ದೇವಭಕ್ತಿಯಿಂದ ಅಲ್ಲಾಹನ ಮುಂದೆ ತನ್ನ ಕಷ್ಟತೆಗಳನ್ನು ಇರಿಸಬೇಕು. ಒಂದು ಮರಣದ ಸ್ಥಿತಿ ಉಂಟಾಗುವ ಮಟ್ಟಿಗೆ ದುಆವನ್ನು ತಲುಪಿಸಬೇಕು. ಆಗ ಆ ಪ್ರಾರ್ಥನೆಯು ಸ್ವೀಕಾರದ ಪದವಿ ತನಕ ತಲುಪುತ್ತದೆ.

ಹರ್ಝ಼ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಇದನ್ನು ಸಹ ನೆನಪಿನಲ್ಲಿಡಿರಿ, ಮೊತ್ತಮೊದಲು ಮಾಡಬೇಕಾದ ಮತ್ತು ದುಆಗಳಲ್ಲಿ ಪ್ರಧಾನ ಮತ್ತು ಆವಶ್ಯಕ ದುಆ ಏನೆಂದರೆ, ಮನುಷ್ಯನು ಸ್ವತಃ ಪಾಪಗಳಿಂದ ಪರಿಶುದ್ಧ ಮತ್ತು ಸ್ವಚ್ಛವಾಗಲಿಕ್ಕಾಗಿ ದುಆ ಮಾಡಬೇಕು ಎಂದಾಗಿದೆ. ಈ ದುಆ ಸ್ವೀಕಾರವಾದರೆ ಮತ್ತು ಮನುಷ್ಯನು ಎಲ್ಲ ರೀತಿಯ ಕೊಳಕು

ಮತ್ತು ಮಾಲಿನ್ಯಗಳಿಂದ ಪರಿಶುದ್ಧನಾಗಿಕೊಂಡು ಅಲ್ಲಾಹನ ದೃಷ್ಟಿಯನ್ನು ಪವಿತ್ರನಾದರೆ, ಮನುಷ್ಯನು ಲೌಕಿಕವಾದ ಆವಶ್ಯಕತೆಗಳಿಗಾಗಿ ಮಾಡುವ ದುಆಗಳನ್ನು ಮಾಡಬೇಕಾದ ಆವಶ್ಯಕತೆಯೇ ಇರುವುದಿಲ್ಲ. ಅವುಗಳು ಸ್ವತಃವೇ ಸ್ವೀಕಾರವಾಗುತ್ತಾ ಹೋಗುತ್ತವೆ.

ಪಾಪಗಳಿಂದ ಪರಿಶುದ್ಧಗೊಳಿಸು ಎಂದು ಮಾಡುವ ದುಆವೇ ಅತ್ಯಂತ ಕಠಿಣ ಮತ್ತು ಪರಿಶ್ರಮದ ದುಆ ಆಗಿದೆ. ಅಲ್ಲಾಹನ ದೃಷ್ಟಿಯಲ್ಲಿ ದೇವಭಕ್ತ ಮತ್ತು ಸನ್ಮಾರ್ಗಿಯಾಗಬೇಕು. ಮನುಷ್ಯನ ಹೃದಯದಲ್ಲಿರುವ ಮರೆಗಳನ್ನು ದೂರಮಾಡಬೇಕಾದದ್ದು ಆವಶ್ಯ. ಅವುಗಳು ದೂರವಾದರೆ, ಇತರ ಮರೆಗಳನ್ನು ದೂರವಾಡಲು ಅಷ್ಟು ಪರಿಶ್ರಮಪಡಬೇಕಾದ ಆವಶ್ಯಕತೆಯಿರುವುದಿಲ್ಲ. ಏಕೆಂದರೆ, ಆಗ ಅಲ್ಲಾಹನ ಕೃಪೆ ಅವನೊಂದಿಗೆ ಇದ್ದುಕೊಂಡು ಸಾವಿರಾರು ಕೆಡುಕುಗಳು ಸ್ವತಃ ದೂರವಾಗಲು ಶುರುವಾಗುತ್ತವೆ. ಹೃದಯದೊಳಗೆ ಪರಿಶುದ್ಧತೆ ಮತ್ತು ಪವಿತ್ರತೆ ಉಂಟಾಗುವಾಗ ಮತ್ತು ಅಲ್ಲಾಹನೊಂದಿಗೆ ನಿಜವಾದ ಸಂಬಂಧ ಉಂಟಾಗುವಾಗ ಅಲ್ಲಾಹನೇ ಅಂತಹ ವ್ಯಕ್ತಿಯ ಸಂರಕ್ಷಕ ಮತ್ತು ಸಹಾಯಕನಾಗುತ್ತಾನೆ. ಅವನು ತನ್ನ ಯಾವುದಾದರೂ ಆವಶ್ಯಕತೆಗಳಿಗಾಗಿ ಅಲ್ಲಾಹನನ್ನು ಬೇಡುವುದಕ್ಕೆ ಮುಂಚಿತವಾಗಿ ಅಲ್ಲಾಹನೇ ಅದನ್ನು ಈಡೇರಿಸಿಕೊಡುತ್ತಾನೆ. ಇದೊಂದು ಬಹಳ ಸೂಕ್ಷ್ಮವಾದ ರಹಸ್ಯವಾಗಿದೆ. ಅವನು ಆ ಸ್ಥಾನಕ್ಕೆ ತಲುಪುವಾಗ ಅವನಿಗೆ ಅದು ಮನವರಿಕೆಯಾಗುವುದು. ಅದಕ್ಕಿಂತ ಮುಂಚೆ ಅವನಿಗೆ ಅದು ಅರ್ಥವಾಗದು. ಆದರೆ ಇದು ದೊಡ್ಡ ಪರಿಶ್ರಮದ ಕೆಲಸವಾಗಿದೆ. ಏಕೆಂದರೆ, ದುಆಗೆ ಕೂಡ ಪರಿಶ್ರಮದ ಆವಶ್ಯತೆಯಿದೆ. ಯಾರು ದುಆದ ಪರಿವೆ ಮಾಡುವುದಿಲ್ಲವೋ ಮತ್ತು ಅದರಿಂದ ದೂರವಿರುತ್ತಾನೋ ಅಲ್ಲಾಹನು ಕೂಡ ಅವನ ಪರಿವೆ ಮಾಡುವುದಿಲ್ಲ ಹಾಗೂ ಅವನಿಂದ ದೂರವಾಗುತ್ತಾನೆ. ಅವಸರಪಡುವುದು ಇಲ್ಲಿ ಪ್ರಯೋಜನಕಾರಿಯಲ್ಲ. ಅಲ್ಲಾಹನು ತನ್ನ ಕೃಪೆ ಮತ್ತು ದಯೆಯಿಂದ ಇಷ್ಟವುಳ್ಳದ್ದನ್ನು ಇಷ್ಟಬರುವಾಗ ನೀಡುವನು. ಅವನು ಅದನ್ನು ಬೇಗನೇ ನೀಡದಿದ್ದರೆ ದೂರು ಹೇಳುವುದು ಮತ್ತು ಅಲ್ಲಾಹನ ಬಗ್ಗೆ ತಪ್ಪುಗ್ರಹಿಕೆ ಇರಿಸಿಕೊಳ್ಳುವುದು ಬೇಡುವವನ ಕೆಲಸವಲ್ಲ. ಬದಲಾಗಿ ಸ್ಥಿರವಾಗಿ ಮತ್ತು ಸಹನೆಯಿಂದ ಬೇಡುತ್ತಾ ಹೋಗಬೇಕು. (ಮಲ್‌ಫೂಝಾತ್, ಸಂಪುಟ-6, ಪುಟ-406-407, 1984)

ಅಲ್ಲಾಹನು ನಮಗೆ ಈ ಸಂಗತಿಗಳನ್ನು ಮಾಡಲು ಸೌಭಾಗ್ಯ ನೀಡಲಿ. ಈ ರಮಝಾನನ್ನು ನಮಗೆ ಅಲ್ಲಾಹನೊಂದಿಗೆ ಸುದೃಢವಾದ ಸಂಬಂಧ ಜೋಡಿಸುವಂತಹದನ್ನಾಗಿ ಮಾಡಲಿ. ಅವನ ಮಾತುಗಳನ್ನು ಪಾಲಿಸುವವರನ್ನಾಗಿ ಮಾಡಲಿ. ಅಲ್ಲಾಹನ ಮೇಲೆ ಸಂಪೂರ್ಣವಾದ ನಂಬಿಕೆ ಇರಿಸುವವರನ್ನಾಗಿ ಮಾಡಲಿ. ದುಆ ಸ್ವೀಕಾರದ ದೃಶ್ಯಗಳನ್ನು ನೋಡುವವರನ್ನಾಗಿ ಮಾಡಲಿ. ರಮಝಾನಿನಲ್ಲೂ ಮತ್ತು ರಮಝಾನಿನ ನಂತರವೂ ಅಲ್ಲಾಹನ ನಿಷ್ಠಾವಂತ ದಾಸರಾಗುವ ಸ್ಥಿತಿಯನ್ನು ಸದಾ ನೆಲೆನಿಲ್ಲಿಸಲಿ. ಎಡವಿ ಬೀಳದಂತಹ ಮಾರ್ಗವನ್ನು ಅಲ್ಲಾಹನು ನಮಗೆ ತೋರಿಸಿಕೊಡಲಿ. ಸದಾ ಅಲ್ಲಾಹನ ಪ್ರೀತಿಯ ನೋಟ ನಮ್ಮ ಮೇಲೆ ಬೀರುತ್ತಿರಲಿ. ಕಾಲಘಟ್ಟದ ಇಮಾಮನ್ನು ಬೈಅತ್ ಮಾಡಿದ ಹಕ್ಕನ್ನು ಈಡೇರಿಸುವವರನ್ನಾಗಿ ಮಾಡಲಿ. ಕಾಲಘಟ್ಟದ ಇಮಾಮನ್ನು ನಂಬುವ ಸೌಭಾಗ್ಯದ ಅನುಗ್ರಹವನ್ನು ಪಡೆದುಕೊಂಡ ನಂತರ ಅದರಿಂದ ದೂರವಾಗುವ ಸ್ಥಿತಿ ಉಂಟಾಗದಿರಲಿ. ಅಲ್ಲಾಹನು ನಮ್ಮನ್ನು ಸದಾ ವಿರೋಧಿಗಳ ಮತ್ತು ಶತ್ರುಗಳ ಕೆಡುಕಿಗಳಿಂದ ಸಂರಕ್ಷಿಸಲಿ. ನಮ್ಮ ದುಆಗಳನ್ನು ಸ್ವೀಕಾರ ಮಾಡುತ್ತಾ ಎದುರಾಳಿಗಳ ಕೆಡುಕುಗಳು ಅವರಿಗೆ ತಿರುಗೇಟು ಆಗುವಂತೆ ಮಾಡಲಿ. ಜಮಾಅತಿನ ಪ್ರಗತಿಯ ಏರ್ಪಾಡು ಸದಾ ಉಂಟುಮಾಡಲಿ. ಒಟ್ಟಿನಲ್ಲಿ ಈ ರಮಝಾನನ್ನು ಸ್ವೀಕಾರಾರ್ಹವಾದ ದುಆಗಳ ಮಾರ್ಗವನ್ನಾಗಿ ಮಾಡಿರಿ. ಅಲ್ಲಾಹನು ನಮಗೆ ಅದರ ಸೌಭಾಗ್ಯ ನೀಡಲಿ.

ಲೋಕದ ಸ್ಥಿತಿಗತಿಗಳಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಲೋಕವನ್ನು ನಾಶನಷ್ಟಗಳಿಂದ ರಕ್ಷಿಸಲಿ. ಜನರಿಗೆ ವಿವೇಕವನ್ನು ನೀಡಲಿ. ಈ ಜನರು ತಮ್ಮ ಸೃಷ್ಟಿಕರ್ತನನ್ನು ಅರಿಯುವಂತಾಗಲಿ.

ಜುಮಾ ನಮಾಝಿನ ನಂತರ ಎಂ.ಟಿ.ಎ. ತಯಾರಿಸಿದ ಒಂದು ಮೊಬೈಲ್ ಆಪ್ಲಿಕೇಶನಿನ ಉದ್ಘಾಟನೆಯನ್ನು ನಾನು ಮಾಡುವೆನು. ಅದರಲ್ಲಿ 313 ಬದರೀ ಸಹಾಬಿಯರ ಕುರಿತು ಇರುವ ನನ್ನ ಖುತ್ಬಗಳನ್ನು ಒಂದೆಡೆ ಒಟ್ಟುಸೇರಿಸಲಾಗಿದೆ. ಈ ವೆಬ್‌ಸೈಟಿನಲ್ಲಿ ಜನರು ಈ ಖುತ್ಬಗಳನ್ನು ನೋಡಬಹುದು ಮತ್ತು ಆಲಿಸಬಹುದು ಎಂಬುದಲ್ಲದೇ ಬದರೀ ಸಹಾಬಿಯರ ಕುರಿತು ತಯಾರಿಸಲಾಗಿರುವ ಫೈಲ್ಸನ್ನು ಓದಬಹುದಾಗಿದೆ. ಎಲ್ಲಿಯ ವರೆಗೆ ನೋಡಲಾಗಿದೆಯೋ ಮತ್ತು ಓದಲಾಗಿದೆಯೋ ಅಲ್ಲಿ ಬುಕ್‌ಮಾರ್ಕ್ ಕೂಡ ಮಾಡಬಹುದಾಗಿದೆ. ಪ್ರತಿ ಸಹಾಬಿಯರ ಕುರಿತು ಪ್ರಶ್ನೋತ್ತರದ ಒಂದು ಪ್ರಶ್ನಾವಳಿ ಇದೆ. ಅದೇ ರೀತಿಯಲ್ಲಿ ಉಪಯುಕ್ತವಾದ ನಕಾಶೆಗಳು ಇವೆ. ಕಠಿಣ ಪದಗಳ ಅರ್ಥಗಳು ಮತ್ತು ಹೆಸರುಗಳ ಅರಬಿ ಉಚ್ಚಾರಣೆ ಕೂಡ ಆಲಿಸಬಹುದಾಗಿದೆ. ಇಲ್ಲಿಯ ವರೆಗೂ ಅಪ್‌ಲೋಡ್ ಆದ ಮಾಹಿತಿಗಳಲ್ಲದೇ ಮುಂದೆ ಬರಲಿರುವ ಹೊಸ ವಿಷಯಗಳನ್ನು ಮತ್ತು ವೀಡಿಯೋಸ್‌ಗಳನ್ನು ಪ್ರತಿ ವಾರ ಅಪ್‌ಲೋಡ್ ಮಾಡಲಾಗುವುದು. ಈ ವೆಬ್‌ಸೈಟಿನ ಐ.ಡಿ. ಹೀಗಿದೆ: www.313companians.org

ನಾನು ಹೇಳಿದಂತೆ ನಮಾಝಿನ ನಂತರ ಇದನ್ನು ಜಾರಿಗೊಳಿಸಲಾಗುವುದು. ಅಲ್ಲಾಹನು ಈ ವೆಬ್‌ಸೈಟನ್ನು ಜನರಿಗೆ ಪ್ರಯೋಜನಕಾರಿಯನ್ನಾಗಿ ಮಾಡಲಿ.

**************

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಪವಾಡದ ಅಸೀಮ ಸಮುದ್ರ ರೀತಿಯ ಜ್ಞಾನ ನೀಡಲಾಗಿದೆ.

**ಈ ಜನರು ಅದೇ ಮಣ್ಣಿನಂತೆ ಸೃಷ್ಟಿಗೊಂಡವರಾಗಿದ್ದಾರೆ. ಆ ವ್ಯಕ್ತಿಯ ನಾಲಿಗೆಯಿಂದ ಹೊರಡಿತ್ತು "ಫತಬಾರಕಲ್ಲಾಹು ಅಹಸನಲ್ ಖಾಲಿಖೀನ್" ಕಾಕತಾಳಿಯದಂತೆ ಅದೇ ವಚನ ಅವತರಿಸಿತು ಆಗ ಅವನು ಧರ್ಮಭ್ರಷ್ಟನಾದನು.**

ಈ ರೀತಿಯ ದುಷ್ಟ ಸ್ವಭಾವದವರು ಸದಾ ಇರುತ್ತಾರೆ. ಅವರು ಅಲ್ಲಾಹನ ಗ್ರಂಥದ ಮೇಲೆಯೇ ಆಕ್ಷೇಪಿಸುವುದರಿಂದ ಹೆದರಲಿಲ್ಲ, ತಿರುಳಿಲ್ಲದವರಾದರೂ ಟೀಕೆ ಮಾಡುವುದರಿಂದ ಹಿಂದುಳಿಯಲಿಲ್ಲ. ಉದಾಹರಣೆಗೆ ಪವಿತ್ರ ಖುರ್‌ಆನ್‌ನ ಸೂರದ ಕೆಲ ವಾಕ್ಯಗಳನ್ನು (ವಚನಗಳನ್ನು) ಉಮ್ರಾಉಲ್ ಯಕೀನ್‌ರ ಒಂದು ಖಸೀದದ ಅಧ್ಯಾಪನೆಯಾಗಿದೆ ಎಂದು ಆ ದುಷ್ಟರು ಆಕ್ಷೇಪವೆತ್ತುತ್ತಾರೆ. ಅಂದರೆ ಅವರಿಗೆ ತಿಳಿಯಬೇಕಾಗಿತ್ತು. ಪವಿತ್ರ ಖುರ್‌ಆನ್ ಆ ಕಥೆಗಳು ಪುರಾತನ ಪುಸ್ತಕದ ಅತ್ಯಂತ ವರ್ಣರಂಜಿತ ಬರಹವೆಂದು ವರ್ಣಿಸಲಾಗಿದೆ. ಮತ್ತು ಅವು ದೈವಿಕ ಜ್ಞಾನದ ಸಾಕ್ಷ್ಯಗಳನ್ನು ಪವಾಡ ರೀತಿಯಲ್ಲಿ ವಿವರಿಸಲಾಗಿದೆ. ಅವು ಯಾವ ಅರಬ್ ಕವಿಯ ಕವನವಾಗಿದೆ ಅಥವಾ ಅಧ್ಯಾಪನೆ ಆಗಿದೆ ಎಂದು. ಹಾಗೆ ಅಂತಹ ವ್ಯಕ್ತಿಯೊಬ್ಬನು ಕುರುಡನಾಗಿದ್ದಾನೆಯೇ ಹೊರತು ದೃಷ್ಟಿ ಹೊಂದಿದವನಲ್ಲ, ಅಂತಹವರು ನದಿಯ ರೀತಿಯಲ್ಲಿ ಹರಿಯುತ್ತಿರುವ ಮಹಾನತೆಯನ್ನು ಕಾಣುತ್ತಿಲ್ಲ. ಒಂದೆರಡು ಪೂರ್ವಿಕ ರೀತಿಯಲ್ಲಿರುವ ವಚನಗಳ ಮೇಲೆ ಸಂಶಯ ಪ್ರವೃತ್ತಿಯಿಂದ ಸಂಶಯವನ್ನು ಉಂಟು ಮಾಡುತ್ತಾರೆ. ಅಂತಹ ಜನರು ಆ ವ್ಯಕ್ತಿಯ ಸಮಾನದಂತೆ ಅವನ ನಾಲಿಗೆಯಿಂದ ಹೊರಟಿತ್ತು. ಫತಬಾಕಕಲ್ಲಾಹು ಅಹಸನುಲ್ ಖಾಲಿಖೀನ್: ಕಾಕತಾಳಿಯವಾಗಿ ಅದೇ ವಚನ ಅವತರಿಸಿತು. ಆಗ ಅವನು ಧರ್ಮಭ್ರಷ್ಟನಾದನು. ಏಕೆಂದರೆ ಅವನು ತಿಳಿದುಕೊಂಡದ್ದೇನೆಂದರೆ ನನ್ನ ವಾಕ್ಯವೇ ಖುರ್‌ಆನ್‌ನಲ್ಲಿ ಸೇರಿಸಲಾಗಿದೆ ಎಂದು. ಇಗ ಪೀರ್ ಮಹರ್ ಆಲಿ ಶಾಹ್ ಸಾಹಿಬರ ಕಾರ್ಯಾಚರಣೆ ನೋಡಿದರೆ ಅವರು ಸ್ವಯಂ ನನ್ನ ಹನ್ನೆರಡು ಭಾಗದ ಗ್ರಂಥದ ಎದುರಿನಲ್ಲಿ ಒಂದು ಭಾಗವು ಸಹ ಬರೆಯಲಾಗಲಿಲ್ಲ. ಅವರು ಅಷ್ಟೊಂದು ಬೃಹತ್ ಗ್ರಂಥದಿಂದ ಒಂದೆರಡು ವಾಕ್ಯಗಳನ್ನು ಪ್ರಸ್ತುತಪಡಿಸಿದ್ದಾರೆ. ಇದು ಇಂತಹದೊಂದು ಪುಸ್ತಕದಲ್ಲಿ ಇದೆ ಎಂದು. ಈಗ ಯೋಚಿಸಿ ಅದು ಎಷ್ಟೊಂದು ಹೇಡಿತನದ ಮಾತಾಗಿದೆ. ಅದನ್ನು ಯಾವೊಬ್ಬ ಸಾಹಿತ್ಯಗಾರನು ಮೆಚ್ಚುವನೇ? ಸಾಹಿತ್ಯಗಾರರು ಬಲ್ಲರು, ಸಾವಿರಾರು ವಾಕ್ಯಗಳಿಂದ ಒಂದೆರಡು ವಾಕ್ಯಗಳು ಅಧ್ಯಾಪನೆ ರೂಪದಲ್ಲಿ ಬಂದು ಸೇರಿದರೆ ಅದರಿಂದ ಸಾರಗರ್ಭಿತ್ವದಲ್ಲಿ ವ್ಯತ್ಯಾಸವೇನು ಉಂಟಾಗುವುದಿಲ್ಲ. ಬದಲು ಈ ರೀತಿಯ ಬಳಕೆಯಿಂದ ಇನ್ನಷ್ಟು ಮೆರಗು ಹೆಚ್ಚಾಗುತ್ತದೆ. (ಅದೇ ಪುಟ-442)

**ಪೀರ್ಮಹರ್ ಅಲಿ ಶಾಹ್ ಕೇವಲ, ಸುಳ್ಳುಗಾರರಲ್ಲ, ಬದಲು ಅಪ್ಪಟ ಸುಳ್ಳುಗಾರರಾಗಿದ್ದಾರೆ, ಜೊತೆಯಲ್ಲಿ ಕುಷ್ಟ ರೋಗಿಯೂ ಹೌದು.**

ಒಬ್ಬ ನ್ಯಾಯವಂತ ಮನುಷ್ಯನು ತಿಳಿಯಬಹುದು. ಯಾವ ವ್ಯಕ್ತಿ ಅಷ್ಟೊಂದು ದೀರ್ಘ ಸಮಯ ಪಡೆದರೂ ತನ್ನ ಏಕಾಂತ ಅವಸ್ಥೆಯಲ್ಲಿ ಒಂದೆರಡು ಪುಟಗಳ 'ಇಜಾಝುಲ್ ಮಸೀಹ್" ರೀತಿಯ ಗ್ರಂಥದ ನಮೂನೆ ಪ್ರಸ್ತುತಪಡಿಸಲಾಗಲಿಲ್ಲ. ಅಂತಹವರು ಲಾಹೋರಿನಲ್ಲಿ ಅವಕಾಶ ದೊರೆತರೆ ಬರೆಯಬಹುದಾಗಿತ್ತು. ಒಬ್ಬನ ಆಶ್ರಯಪಡೆದು ಸಹ ಏಳಲಾಗದಂತಹ ವೃದ್ಧನು ಆಶ್ರಯವಿಲ್ಲದೆ ಎದ್ದು ಬರಲು ಹೇಗೆ ಸಾಧ್ಯ? ನಿಸ್ಸಂಶಯವಾಗಿಯೂ ತಿಳಿದುಕೊಳ್ಳಿರಿ. ಪೀರ್ ಮಹರ್ ಅಲಿ ಶಾಹ್ ಕೇವಲ ಸುಳ್ಳಿನ ಆಸರೆಯಿಂದ ತಮ್ಮ ಕುಷ್ಟರೋಗದ ಮೇಲೆ ಪರದೆ ಎಳೆಯುತ್ತಿದ್ದಾರೆ ಮತ್ತು ಅವರು ಕೇವಲ ಸುಳ್ಳುಗಾರರಲ್ಲ. ಬದಲು ಅಪ್ಪಟ ಸುಳ್ಳುಗಾರರಾಗಿದ್ದಾರೆ. ಅವರ ಈ ಕೊನೆಯ ಸುಳ್ಳು ಸಹ ನನಗೆ ಮರೆಯಲು ಸಾಧ್ಯವಿಲ್ಲ. ಅವರು ಮತ್ತೊಮ್ಮೆ ಈ ಪುಸ್ತಕದಲ್ಲಿ ಆ ತಕರಾರು ಎತ್ತಿದ್ದಾರೆ. ನಾನು ನನ್ನ ವಾಗ್ದಾನ ಪ್ರಕಾರ ಲಾಹೋರಿಗೆ ಬಂದೆ. ಆದರೆ ನೀವು

ಖಾದಿಯಾನಿನಿಂದ ಹೊರಗೆ ಸಹ ಬರಲಿಲ್ಲ. ಆದರೆ ಯಾವ ಜನರು ಅವರ ಜಾಹೀರಾತನ್ನು ನೋಡಿದ್ದಾರೆ. ಅವರು ಬೇಕಾದರೆ ಸಾಕ್ಷ್ಯ ನೀಡಬಹುದು. ಅವರು ಜಾಣನರಿಯಂತೆ ಎದುರಾಗದೆ ಪರಾರಿಯ ಮಾರ್ಗ ತುಳಿದಿದ್ದಾರೆ. (ಅದೆ ಪುಟ 443).

**ಈ ದೇಶದ ಪೀಠಾಧಿಪತಿಗಳು ಇವರಾಗಿದ್ದಾರೆ. ಅವರು ಸದಾಕಾಲಕ್ಕಾಗಿ ತಮ್ಮ ಮುಖದ ಮೇಲೆ ಒಂದು ಕಪ್ಪು ಕಲೆಯನ್ನು ಹಚ್ಚಿಕೊಂಡಿದ್ದಾರೆ.**

ಇಜಾಝುಲ್ ಮಸೀಹ್ ಗ್ರಂಥದ ಪ್ರಸಾರದಿಂದ ಪೀರ್ ಮಹರ್ ಅಲಿ ಸಾಹೇಬರಿಗೆ ಮತ್ತೊಂದು ಅವಕಾಶ ನೀಡಲಾಗಿತ್ತು. ಅವರಿಂದ ಸಾಧ್ಯವಾದರೆ ಈಗಲಾದರೂ ತನ್ನ ಶೈಕ್ಷಣಿಕ ಸಾಮರ್ಥ್ಯದಿಂದ ನನ್ನ ಈ ಪ್ರತಿಭೆಯನ್ನು ಕುಗ್ಗಿಸಿ ತೋರಿಸಿರಿ. ಅದರಿಂದ ನೂರಾರು ಜನರು ನನ್ನ ಸಂಘಟನೆಯಲ್ಲಿ ಬೈಅತ್ ಮಾಡಿ ಸೇರಿಕೊಳ್ಳುತ್ತಿದ್ದಾರೆ. ಆದರೆ ಅವರು ಸಂಕೇತದಿಂದ ಸಹ ಮಾತನಾಡದ ಮೂಕನಂತಿದ್ದಾರೆ. ಅವರು ಏನಾದರೂ ಮಾಡಿ ತೋರಿಸಿದ್ದಾರೆ ಅಂದರೆ ಅದು ಯಾರು ಎರಡು ನೂರು ಗ್ರಂಥದ ಪುಟಗಳಿಂದ ಒಂದೆರಡು ವಾಕ್ಯಗಳನ್ನು ಹಿಡಿದು ಅದು ಕೃತಿಚೌರ್ಯವಾಗಿದೆ ಅಂದದ್ದು ಮತ್ತು ಕೇವಲ ಒಂದೆರಡು ಮುದ್ರಿತ ತಪ್ಪುಗಳನ್ನು ಹಿಡಿದು ವ್ಯಾಕರಣದ ತಪ್ಪು ಎಂದಿದ್ದಾರೆ. ತಮ್ಮ ಅಜ್ಞಾನತೆಯಿಂದ ಕೆಲ ಸಾರಗರ್ಭಿತ ಮತ್ತು ವ್ಯಾಕರಣಭರಿತ ವಾಕ್ಯಗಳನ್ನು ಬೇಕಂತಲೂ ಅತಥ್ಯವಾಗಿದೆ ಮತ್ತು ತಪ್ಪಾಗಿದೆ ಎಂದು ಸಾರಿರುವರು ಇವರಾಗಿದ್ದಾರೆ. ಈ ದೇಶದ ಪೀಠಾಧಿಪತಿಗಳು ಅವರು ಅನಗತ್ಯವಾಗಿ ಮೌಲ್ವಿ ಎಂದುಕೊಂಡು ಸದಾಕಲಕ್ಕಾಗಿ ತಮ್ಮ ಮುಖದ ಮೇಲೆ ಒಂದು ಕಪ್ಪು ಕಲೆಯನ್ನು ಹಚ್ಚಿಕೊಂಡಿದ್ದಾರೆ. (ಅದೇ ಪುಟ 444).

**ಇವರು ಮೆಹರ್ ಅಲಿ ಅಲ್ಲ ಬದಲಿಗೆ ಮುಹರ್ ಅಲಿ ಆಗಿದ್ದಾರೆ**

ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಅಂದಹಾಗೆ ಅವರ ಹೆಸರು ಮಹರ್ ಅಲಿ ಅಲ್ಲ, ಬದಲು ಮುಹರ್ ಅಲಿಯಾಗಿದೆ. ಏಕೆಂದರೆ ಅವರು ತಮ್ಮ ವಿವಶತೆ ಮೂಲಕ ಮತ್ತು ಮೌನವಹಿಸುವ ಮೂಲಕ "ಇಜಾಝುಲ್ ಮಸೀಹ್" ಗ್ರಂಥದ ಮಹಾನತೆಯ ಮೇಲೆ ತಮ್ಮ ಮುಹರ್ (ಮುದ್ರೆ) ಹಾಕಿದಂತಾಗಿದೆ. (ನುಝುಲುಲ್ ಮಸೀಹ್, ರೂಹಾನಿ ಖಝಾಈನ್, ಸಂಪುಟ-18, ಪುಟ-432 ಟಿಪ್ಪಣಿ).

ಈಗ ಕೆಳಗೆ ನಾವು ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಕೆಲ ಆ ವಿಶ್ವಾಸವರ್ಧಕ ಅಧ್ಯಾಪನೆಗಳನ್ನು ಪ್ರಸ್ತುತಪಡಿಸುತ್ತೇವೆ. ಅದರಲ್ಲಿ ಅವರು ಅಲ್ಲಾಹನು ಅವರಿಗೆ ದಯಪಾಲಿಸಿದ ವಿಶೇಷವಾದ ಖುರ್‌ಆನ್‌ನ ಜ್ಞಾನವನ್ನು ವಿವರಿಸಿದ್ದಾರೆ. ಹಾಗೂ ಯಾರಿಗೂ ಪ್ರತಿರೂಪ ತರಲು ಸಾಧ್ಯವಾಗಲಿಲ್ಲ. ಅದೇ ರೀತಿ ಅರಬಿಯ ಜ್ಞಾನವನ್ನು ಸಹ ಅಲ್ಲಾಹನು ಅವರಿಗೆ ದಯಪಾಲಿಸಿದ್ದ. ಅದು ಅವರಿಗೆ ಒಂದು ಪವಾಡ ಮತ್ತು ದೃಷ್ಟಾಂತ ರೂಪದಲ್ಲಿ ನೀಡಲಾಗಿತ್ತು. ಅದೇ ಆಧಾರದಲ್ಲಿ ಅವರು ಮೌಲ್ವಿಗಳಿಗೆ ಮತ್ತು ದರ್ಗಾ ಪೀಠಾಧಿಪತಿಗಳಿಗೆ ಪ್ರತಿವಾದಿಯಾಗಿ ಬರಲು ಆಹ್ವಾನಿಸುತ್ತಿದ್ದರು. ಏಕೆಂದರೆ ಈ ಜ್ಞಾನ ಅವರಿಗೆ ಅಲ್ಲಾಹನು ಒಂದು ಪವಾಡ ಸ್ವರೂಪವಾಗಿ ನೀಡಿದ್ದನು.

**ಈಗ ಯಾರಿಗೂ ಸಹ ಖುರ್‌ಆನ್‌ನ ಸಾಕ್ಷ್ಯಗಳನ್ನು ಎದುರಿಸುವ ಶಕ್ತಿಯಿಲ್ಲ.**

ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಇನ್ನೊಂದು ಭವಿಷ್ಯವಾಣಿಯೂ ಸಹ ದೈವಿಕ ದೃಷ್ಟಾಂತವಾಗಿದೆ. ಅದು ಬರಾಹೀನೆ ಅಹ್ಮದಿಯಾದ ಪುಟ 238 ರಲ್ಲಿ ನಮೂದಿತವಾಗಿದೆ. ಅದು "ಅರ್ರಹ್‌ಮಾನ್ ಅಲ್ಲಮಲ್ ಖುರ್‌ಆನ್" ಎಂಬುದಾಗಿದೆ. ಈ ವಚನದಲ್ಲಿ ಅಲ್ಲಾಹನು ಖುರ್‌ಆನ್‌ನ್ನು ಕಲಿಸುವ ವಾಗ್ದಾನ ನೀಡಿದ್ದನು. ಹಾಗೆ ಈ ವಾಗ್ದಾನವನ್ನು ಯಾವ ರೀತಿಯಲ್ಲಿ ಪೂರ್ತಿಕರಿಸಿದ್ದಾನೆಂದರೆ ಈಗ ಯಾರಿಗೂ ಖುರ್‌ಆನ್‌ನ ಸಾಕ್ಷ್ಯಗಳನ್ನು ಅಲ್ಲಗಳೆಯುವ ಶಕ್ತಿ ಇಲ್ಲ. ನಾನು ಸತ್ಯವಾಗಿ ಹೇಳುತ್ತೇನೆ. ಈ ದೇಶದ ಎಲ್ಲ ಮೌಲ್ವಿಗಳಲ್ಲಿ ಯಾರಾದರು ಒಬ್ಬ ಮೌಲ್ವಿ ಖುರ್‌ಆನ್‌ನ ಸಾಕ್ಷ್ಯಗಳ ವಿಷಯದಲ್ಲಿ ನನ್ನನ್ನು ಎದುರಿಸಲು ಮುಂದೆ ಬಂದರೆ, ನಾನು ಬರೆದ ಯಾವುದೆ ಸೂರದ ಒಂದು ವ್ಯಾಖ್ಯಾನ ಮತ್ತು ನನ್ನ ಯಾರಾದರು ವಿರೋಧಿ ಬರೆದದ್ದುನ್ನು ತುಲನೆ ಮಾಡಿದರೆ ಅವನು ಅತ್ಯಂತ ಅಪಮಾನಿತನಾಗುವನು ಮತ್ತು ನನ್ನನ್ನು ಎದುರಿಸಲಾರನು. ಅದೇ ಕಾರಣದಿಂದಾಗಿಯೇ ಮೌಲ್ವಿಗಳಿಗೆ ಪದೇ ಪದೇ ಪ್ರತಿವಾದಿಗಳಾಗಲು ಆಹ್ವಾನಿಸಿದರು. ಇತ್ತ ಮುಖ ಮಾಡಲಿಲ್ಲ. ಹಾಗೆ ಇದೊಂದು ಮಹೋನ್ನತವಾದ ದೃಷ್ಟಾಂತವಾಗಿದೆ. ಆದರೆ ನ್ಯಾಯವಂತರಿಗೆ ಮತ್ತು ವಿಶ್ವಾಸ ಉಳ್ಳವರಿಗೆ ಮಾತ್ರ.

(ಝಮೀಮಾ ರಿಸಾಲ ಅಂಜಾಮೆ ಆಥಮ್, ರೂಹಾನಿ ಖಝಾಈನ್, ಸಂಪುಟ-11, ಪುಟ-291)

ಈ ದೇವವಾಣಿ ಮೂಲಕ ಅಲ್ಲಾಹನು ನನಗೆ ಖುರ್‌ಆನ್‌ನ ಜ್ಞಾನವನ್ನು ನೀಡಿರುವನು ಮತ್ತು ನನ್ನ ಹೆಸರು ಅವ್ವಲುಲ್ ಮೂಮಿನೀನ್ (ಸತ್ಯವಿಶ್ವಾಸಿಗಳಲ್ಲಿ ಪ್ರಥಮನು) ಎಂದು ಕರೆದಿರುವನು. ಮತ್ತು ನನಗೆ ಸಮುದ್ರ ರೀತಿಯ ಜ್ಞಾನ ಹಾಗೂ ಸಾಕ್ಷ್ಯಗಳಿಂದ ತುಂಬಿಕೊಟ್ಟಿರುವನು. ಮತ್ತು ನನಗೆ ಪದೇ ಪದೇ ದಿವ್ಯವಾಣಿಯಾಗಿದೆ. ಈ ಕಾಲಘಟ್ಟದಲ್ಲಿ ದೈವಿಕ ಜ್ಞಾನ ಹೊಂದಿದವರಾಗಲಿ, ದೈವಿಕ ಪ್ರೇಮ ಹೊಂದಿದವರಾಗಲಿ ನಿನ್ನ ಜ್ಞಾನ ಮತ್ತು ಪ್ರೇಮಕ್ಕೆ ಸರಿಸಾಟಿಯಾಗಿರುವುದಿಲ್ಲ.

(ಝುರೂರತುಲ್ ಇಮಾಮ್, ರೂಹಾನಿ ಖಝಾಈನ್, ಸಂಪುಟ-13, ಪುಟ-502)

**ನನಗೆ ಖುರ್‌ಆನ್‌ನ ಸಾಕ್ಷ್ಯಗಳ ಜ್ಞಾನ ಅರಿವಿಕೆಯಲ್ಲಿಯೂ ಎಲ್ಲರ ಮೇಲೆ ಒಂದು ವಿಜಯವನ್ನು ದಯಪಾಲಿಸಿರುವನು.**

ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ನನಗೆ ಆ ದೇವ ಮೇಲೆ ಆಣೆ ಅವನ ಕೈಯಲ್ಲಿ ಜೀವವಿದೆ, ಖುರ್‌ಆನ್‌ನ ಜ್ಞಾನ ಮತ್ತು ಸಾಕ್ಷ್ಯಗಳನ್ನು ಅರಿಯುವ ಪ್ರತಿಯೊಬ್ಬನ ಆತ್ಮದ ಮೇಲೆ ನನಗೆ ವಿಜಯ ನೀಡಲಾಗಿದೆ. ಹಲವು ಸಲ ವಿರೋಧಿ ಮೌಲ್ವಿಗಳಿಗೆ ಖುರ್‌ಆನ್‌ನ ತಫ್ಸೀರ್ (ವ್ಯಾಖ್ಯಾನ) ಬರೆಯಲು ಆಹ್ವಾನಿಸಿರುತ್ತೇನೆ. ಆದರೆ ಅವರು ಬರಲಿಲ್ಲ. ಬಂದರೂ ಅಲ್ಲಾಹನು ಅವರಿಗೆ ಅಪಮಾನಿತರಾಗಿ ನಾಚಿಕೆ ಪಡುವಂತೆ ಮಾಡುತ್ತಿದ್ದನು. ಹಾಗೆ ಆ ರೀತಿಯ ಖುರ್‌ಆನ್‌ನ ಅರಿವು ನನಗೆ ನೀಡಲಾಗಿದೆ. ಇದು ಅಲ್ಲಾಹನ ಒಂದು ದೃಷ್ಟಾಂತವಾಗಿದೆ. (ಸಿರಾಜೆ ಮುನೀರ್, ರೂಹಾನಿ ಖಝಾಈನ್, ಸಂಪುಟ-12, ಪುಟ-41)

ನನಗೆ ವಿಜಯಿಯಾಗಿಯೇ ಪಡೆಯುವರು. ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಧರ್ಮದ ಮತ್ತು ಖುರ್‌ಆನ್‌ನ ಜ್ಞಾನ ಸಾಕ್ಷ್ಯಗಳನ್ನು ಮತ್ತು ರಹಸ್ಯಗಳನ್ನು ಯಾವ ಅರ್ಥಗರ್ಭಿತ ಮತ್ತು ತತ್ವಭರಿತವಾಗಿ ನಾನು ಬರೆಯಬಲ್ಲೆನೋ ಅದನ್ನು ಇನ್ನೊಬ್ಬರು ಬರೆಯಲು ಸಾಧ್ಯವಿಲ್ಲ. ಒಂದು ಲೋಕವೇ ಒಟ್ಟುಗೂಡಿ ನನ್ನನ್ನು ಪರೀಕ್ಷಿಸಲು ಮುಂದಾದರೆ ನನ್ನನ್ನು ವಿಜಯಿಯಾಗಿ ಕಾಣುವರು. ಎಲ್ಲ ಜನರು ನನ್ನ ಎದುರಾಗಿ ನಿಂತರೂ ಅಲ್ಲಾಹನು ತನ್ನ ಅನುಗ್ರಹದಿಂದ ನನ್ನ ಬಲವೇ ಹೆಚ್ಚಾಗಿಸುವುದನ್ನು ನೋಡುವಿರಿ. ನಾನು ಕೂಲಂಕುಶವಾಗಿ ಹೇಳುವೆನು. ಮತ್ತು ದೃಢ ಶಬ್ದಗಳಲ್ಲಿ ಹೇಳುವೆನು ಈ ಸಮಯ ಓ ಮುಸಲ್ಮಾನರೆ! ನಿಮ್ಮಲ್ಲಿ ಮುಹದ್ದಿಸ್ ಮುಫಸ್ಸಿರ್ ಜನರು ಸಹ ಇದ್ದಾರೆ ಮತ್ತು ಖುರ್‌ಆನ್‌ನ ಜ್ಞಾನಗಳನ್ನು ತಿಳಿದವರು ಎನ್ನುವವರೂ ಇದ್ದಾರೆ, ಸಾಹಿತ್ಯದ ತತ್ವಭರಿತದ ದಾವೆ ಮಾಡುವವರು ಇದ್ದಾರೆ, ಸಜ್ಜನರು ಎನಿಸಿಕೊಳ್ಳುವವರೂ ಇದ್ದಾರೆ ಮತ್ತು ಚಿಶ್ತಿ ಖಾದರಿ, ನಕ್ಷ್‌ಬಂಧಿ, ಸಹರ್‌ವರ್ದಿ ಎಂದು ತಮ್ಮನ್ನ ಕರೆಯಿಸಿಕೊಳ್ಳುವವರೂ ಇದ್ದಾರೆ. ಆದ್ದರಿಂದ ಏಳಿರಿ. ಮತ್ತು ಈ ಸಮಯ ನನ್ನನ್ನು ಎದುರಿಸಿ ತೋರಿಸಿರಿ. (ಅಯ್ಯಾಮುಸ್ಸುಲಹ್, ರೂಹಾನಿ ಖಝಾಈನ್, ಸಂಪುಟ-14, ಪುಟ-407)

**ದೈವಿಕ ಅರಿವು ವಾಗ್ದತ್ತ ಮಸೀಹರೊಂದಿಗಿದೆ.**

ನಾನು ನಿಮಗೆ ದೃಢಪಡಿಸುವೆನು. ದೈವಿಕ ಅರಿವು ನನ್ನ ಜೊತೆಗಿದೆ. ಆ ಪರಮ ಜ್ಞಾನಿಯೂ ಬಯಸಿದಾಗಲೆಲ್ಲ ಖುರ್‌ಆನ್‌ನ ಸಾಕ್ಷ್ಯಗಳನ್ನು ನನಗೆ ಅನುಗ್ರಹಿಸುತ್ತಾನೆ. ವಾಸ್ತವವಾದ ತನ್ನ ಇಂಗಿತವು ಕೆಲ ವಚನಗಳ ಮೂಲಕ ಅದರ ಸಾಕ್ಷ್ಯಗಳೊಂದಿಗೆ ನನ್ನ ಮೇಲೆ ಪ್ರಕಟಗೊಳಿಸುತ್ತಾನೆ. ಒಂದು ಕಬ್ಬಿಣದ ಸಲಾಖೆಯಂತೆ ಏಕತ್ವ ಹೃದಯದೊಳಗೆ ದಾಖಲಿಸುತ್ತಾನೆ. ಈಗ ನಾನು ಆ ದೇವನ ಅನುಗ್ರಹವನ್ನು ಹೇಗೆ ತಳ್ಳಿಹಾಕಲಿ ಮತ್ತು ಮಳೆ ಸುರಿಸುವ ರೀತಿಯಲ್ಲಿ ಸುರಿಯುತ್ತಿರುವ ಅವನ ಅನುಗ್ರಹವನ್ನು ಹೇಗೆ ನಿರಾಕರಿಸಲಿ. (ಮುಬಾಹಿಸ್ ಲೂಧಿಯಾನ, ರೂ. ಖ ಸಂ 4, ಪುಟ 21).

**ಯಾವುದಾದರೂ ಮೌಲ್ವಿ ನನ್ನ ಎದುರಿನಲ್ಲಿ ಅರಬಿಯ ಅರ್ಥ ಹಾಗೂ ತತ್ವದಲ್ಲಿ ಎದುರಿಸಲು ಬಂದರೆ ಪರಾಜಿತನಾಗುವನು.**

ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ನಾನು ಮತ್ತೊಮ್ಮೆ ಸತ್ಯವಾದಿಗಳ ಅವಗಾಹನೆಗಾಗಿ ಹೇಳಬಯಸುವುದೇನೆಂದರೆ, ಅವರು ಇನ್ನು ಸಹ ತಿಳಿದುಕೊಳ್ಳದಿದ್ದರೆ ಹೊಸದಾಗಿ ಮತ್ತೊಮ್ಮೆ ದೃಢಪಡಿಸಿಕೊಳ್ಳಲಿ. ನೆನಪಿಡಿರಿ ಅಲ್ಲಾಹನ ಆರು ದೃಷ್ಟಾಂತಗಳು ನನ್ನೊಂದಿಗಿದೆ. ಮೊದನೆಯದಾಗಿ ಹೇಳುವುದೇನೆಂದರೆ ಯಾರಾದರೂ ಮೌಲ್ವಿ ಅರಬಿಯ ಸಾರವನ್ನು ತತ್ವಾಧಾರಿತವಾಗಿ ನನ್ನ ಗ್ರಂಥದಿಂದ ಎದುರಿಸಿದರೆ ಅಲ್ಲಾಹನು ನಿಮ್ಮನ್ನು ಅಪಮಾನಗೊಳಿಸುವನು. ನಾನು ಪ್ರತಿಯೊಬ್ಬ ಅಹಂಕಾರರಿಗೆ ಈ ಹಕ್ಕು ನೀಡುತ್ತೇನೆ. ನನ್ನ ಅದೇ ಅರಬಿ ಪತ್ರದ ಎದುರಾಗಿ ಬರೆದು ಪರೀಕ್ಷಿಸಿ ನೋಡಿಕೊಳ್ಳಲಿ. ಅವರು ಈ ಪತ್ರವನ್ನೇ ಎದುರಾಗಿ ಸ್ವೀಕರಿಸಿ ಒಂದು ಪತ್ರಿಕೆ ವ್ಯವಸ್ಥೆಗೊಳಿಸಿದರೆ, ಕವನ ಅಥವಾ ಬರಹ ಸಿದ್ಧಗೊಳಿಸಿದರೆ, ಮತ್ತು ಅದನ್ನು ಓರ್ವ ಅರಬಿ ಮಾತೃಭಾಷೆಯವರು ಪ್ರಮಾಣ ಮಾಡಿ ಅದನ್ನು ದೃಢೀಕರಿಸಿದರೆ ನಾನು

ಸುಳ್ಳುಗಾರ.

ಎರಡನೆಯದಾಗಿ ಈ ದೃಷ್ಟಾಂತ ಸ್ವೀಕಾರ ಮಾಡುವುದಿಲ್ಲ ಎಂದರೆ ನನ್ನ ವಿರೋಧಿಗಳು ಯಾವುದೇ ಖುರ್‌ಆನ್‌ನ ಒಂದು ಸೂರದ ಪ್ರತಿಯಾಗಿ ವ್ಯಾಖ್ಯಾನ ಬರೆದು ತೋರಿಸಲಿ. ಅಂದರೆ ಸಮಕ್ಷಮ ಒಂದು ಸ್ಥಳದಲ್ಲಿ ಕುಳಿತುಕೊಂಡು ಅಂದಾಜಿನಂತೆ ಪವಿತ್ರ ಖುರ್‌ಆನ್ ತೆರೆದು ಅದರಿಂದ ಮೊದಲು ಏಳು ವಚನಗಳನ್ನು ಆಯ್ದುಕೊಂಡು ಅದರ ವ್ಯಾಖ್ಯಾನ ನಾನು ಬರೆಯುತ್ತೇನೆ. ನನ್ನ ವಿರೋಧಿಗಳು ಸಹ ಬರೆಯಲಿ, ಸತ್ಯಸಾಕ್ಷ್ಯಗಳ ವಿವರಣೆಯಲ್ಲಿ ನಾನು ವಿಜಯಿಯಾಗಲಿಲ್ಲ ಎಂದರೆ ನಾನು ಸುಳ್ಳುಗಾರ ಎಂದು ತಿಳಿಯಲಿ. (ಝುಮೀಮ ರಿಸಾಲ ಅಂಜಾಮೆ ಆಥಮ್, ರೂಹಾನಿ ಖಝಾಈನ್, ಸಂಪುಟ-11, ಪುಟ-304)

ನಾನು ಈ ಜ್ಞಾನ ಪಡೆದು ಎಲ್ಲಾ ವಿರೋಧಿಗಳಿಗೆ ಅದು ಅಬ್ದುಲ್ ಹಕ್ಕು ಅವರ ಪಂಥವಾಗಲಿ, ಬಟಾಲ್ವಿ ಅವರ ಪಂಥವಾಗಲಿ, ಒಟ್ಟಿನಲ್ಲಿ ಎಲ್ಲರಿಗೂ ಉಚ್ಚ ಸ್ವರದಲ್ಲಿ ಆಹ್ವಾನಿಸಿ ಹೇಳಿದ್ದೇನೆ. ನನಗೆ ಖುರ್‌ಆನ್‌ನ ಸತ್ಯಸಾಕ್ಷ್ಯಗಳು ಮತ್ತು ಜ್ಞಾನವನ್ನು ನೀಡಲಾಗಿದೆ. ನಿಮ್ಮಲ್ಲಿ ಯಾರಿಂದಲೂ ನನ್ನ ಎದುರಾಗಿ ಖುರಆನ್‌ನ ಸತ್ಯಸಾಕ್ಷ್ಯಗಳು ವಿವರಿಸಲು ಸಾಧ್ಯವಿಲ್ಲ. ಹಾಗೆ ಈ ಘೋಷಣೆ ಆದ ನಂತರ ಯಾರೂ ಸಹ ನನ್ನ ಎದುರಿಗೆ ಬರಲಿಲ್ಲ. ಹೀಗೆ ಅಜ್ಞಾನತೆ ಅದು ಎಲ್ಲ ನೀಚತನದ ಬೇರಾಗಿದೆ. ಅದರ ಮೇಲೆ ಅವರು ಮುದ್ರೆ ಹಾಕಿದರು. (ಅದೇ ಪುಟ 311 ಟಿಪ್ಪಣಿ.)

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಪ್ರತಿಯೊಂದು ತಪ್ಪಿಗೆ ಒಂದು ರೂಪಾಯಿ ಬಹುಮಾನ ಪಡೆಯಲು ವಿಧಿಸಿದ ಶರತ್ತೇನೆಂದರೆ-* ಮೆಹೆರ್ ಅಲಿ ನನ್ನ ಪ್ರತಿಯಾಗಿ ವ್ಯಾಖ್ಯಾನ ಬರೆಯಬೇಕು * ವ್ಯಾಖ್ಯಾನ ಅರಬಿಯಲ್ಲಿ ಬರೆಯಬೇಕು. ಕೊಟ್ಟ ಅವಧಿಯೊಳಗೆ ಬರೆಯಬೇಕು. ಒಂದು ದೀರ್ಘ ಅವಧಿಯ ನಂತರ ಮಹರ್ ಅಲಿ ಅವರು "ಸೈಫ್ ಚಿಶ್ತಿಯಾಯಿ" ಹೆಸರಿನ ಒಂದು ಪುಸ್ತಕ ಉರ್ದುವಿನಲ್ಲಿ ಬರೆದು ಹಝ್ರತ್ ಮಸೀಹ್ ಮೌಊದ್(ಅ) ಅವರಿಗೆ ಕಳುಹಿಸಿದ್ದರು. ಅದು ಸೂರ: ಫಾತಿಹದ ವ್ಯಾಖ್ಯಾನ ಆಗಿರಲಿಲ್ಲ. ಬದಲು ಕೇವಲ ನಿಷ್ಪ್ರಯೋಜಕ ಟೀಕೆ ಟಿಪ್ಪಣಿ ಆಧಾರಿತ ಒಂದು ಅರ್ಥಹೀನ ಪುಸ್ತಕವಾಗಿತ್ತು. ಅದರ ವಿವರ ನಾವು ಇನ್‌ಶಾಅಲ್ಲಾಹ್ ಮುಂದಿನ ಸಂಚಿಕೆಯಲ್ಲಿ ನೀಡುವೆವು. **(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಸಾಮ್ಯತೆ ಸೃಷ್ಟಿಯಾಗುತ್ತದೆ. ಅದೇ ರೀತಿ ಅಲ್ಲಾಹನು ತಿನ್ನುವುದರಿಂದ ಮತ್ತು ಕುಡಿಯುವುದರಿಂದ ಶುದ್ಧನಾಗಿದ್ದಾನೆ. ಮನುಷ್ಯನು ತಿನ್ನುವುದು ಮತ್ತು ಕುಡಿಯುವುದನ್ನು ಬಿಡಲು ಸಾಧ್ಯವಿಲ್ಲ, ಆದರೆ ಪವಿತ್ರ ಮಾಸ ರಮಝಾನಿನಲ್ಲಿ ಅವನು ಸರ್ವಶಕ್ತನಾದ ಅಲ್ಲಾಹನಿಗೆ ಒಂದು ರೀತಿಯ ಹೋಲಿಕೆಯನ್ನು ಸೃಷ್ಟಿಸುತ್ತಾನೆ. ಹೇಗೆ ಅಲ್ಲಾಹನಿಂದ ಒಳ್ಳೆಯದೇ ವ್ಯಕ್ತವಾಗುತ್ತದೋ ಅದೇ ರೀತಿ ಮನುಷ್ಯನಿಗೆ ಉಪವಾಸದಲ್ಲಿ ವಿಶೇಷವಾಗಿ ಒಳಿತು ಮಾಡಲು ಆದೇಶವಿದೆ. ರಸೂಲುಲ್ಲಾಹ್(ಸ) ನುಡಿದರು: ಯಾವ ವ್ಯಕ್ತಿ ಹಿಂದಿನಿಂದ ದೂಷಿಸುವುದು, ಚಾಡಿಹೇಳುವುದು ಮತ್ತು ದುರ್ವಚನ ಇತ್ಯಾದಿಗಳಿಂದ ದೂರವಿರುವುದಿಲ್ಲವೋ ಅಂತಹ ವ್ಯಕ್ತಿಯ ಉಪವಾಸ ಸಮ್ಮತವಾಗುವುದಿಲ್ಲ. ಅಂದರೆ ಮೂಮಿನ್ (ಭಯಭಕ್ತಿಯುಳ್ಳವ) ಒಳಿತೇ ವ್ಯಕ್ತವಾಗಲಿ ಎಂದು ಪ್ರಯತ್ನಿಸುತ್ತಾನೆ. ಅದೇ ರೀತಿ ಆತನು ಹಿಂದಿನಿಂದ ದೋಷಿಸುವುದರಿಂದ ಮತ್ತು ಜಗಳವನ್ನು ತಪ್ಪಿಸಲು ಪ್ರಯತ್ನಿಸುತ್ತಾನೆ. ಈ ರೀತಿಯಾಗಿ ಅವನು ಸರ್ವಶಕ್ತನಾದ ಅಲ್ಲಾಹನಿಗೆ ಸಾಧ್ಯವಾದಷ್ಟು ಹೋಲಿಕೆಯನ್ನು ಸೃಷ್ಟಿಸುತ್ತಾನೆ ಮತ್ತು ಎಲ್ಲವೂ ಅದರ ಹೋಲಿಕೆಯತ್ತ ಸಾಗುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಪರ್ಷಿಯನ್‌ನ ಒಂದು ಗಾದೆಮಾತಿದೆ "ಕುನ್‌ದ್ ಹಮ್‌ಜಿನ್ಸ್ ಬಾಹಮ್ ಜಿನ್ಸ್ ಪರ್ವಾಝ್" ಎಂದು.

ಹೀಗೆ ಉಪವಾಸದ ಒಂದು ಆಧ್ಯಾತ್ಮಿಕ ಪ್ರಯೋಜನವೆಂದರೆ ಮನುಷ್ಯನು ದೇವರೊಂದಿಗೆ ಉನ್ನತ ಮಟ್ಟದ ಸಂಪರ್ಕವನ್ನು ಪಡೆಯುತ್ತಾನೆ ಮತ್ತು ದೇವರೇ ಅವರ ರಕ್ಷಕನಾಗುತ್ತಾನೆ.

**(ತಫ್ಸೀರೆ ಕಬೀರ್, ಸಂಪುಟ-2, ಪುಟ-378, ಮುದ್ರಣ ಖಾದಿಯಾನ್ 2010)**

### ಅಂತಿಮ ವಿಜಯ

ಪ್ರಾಯಶಃ ಕೊನೆಗೆ ಕ್ರೈಸ್ತ ಧರ್ಮ ಲೋಕದಾದ್ಯಂತ ವ್ಯಾಪಿಸುವುದೆಂದು ಅಥವಾ ಬೌದ್ಧ ಧರ್ಮ ಲೋಕವನ್ನೆಲ್ಲ ಆವರಿಸುವುದೆಂದು ಭೂಲೋಕದ ಜನರು ಆಲೋಚಿಸುತ್ತಿರಬಹುದು. ಆದರೆ ಅವರ ಈ ಯೋಚನೆ ತಪ್ಪಾಗಿದೆ. ಆಕಾಶದಲ್ಲಿ ದೇವನಿಂದ ನಿರ್ಧರಿಸಲ್ಪಡುವವರೆಗೆ ಯಾವುದೇ ಕಾರ್ಯವು ಭೂಮಿಯಲ್ಲಿ ಸಂಭವಿಸಲಾರದು. ಅಂತಿಮವಾಗಿ ಇಸ್ಲಾಮ್ ಧರ್ಮ ಜನರ ಹೃದಯಗಳನ್ನು ಜಯಿಸುವುದು ಎಂದು ಆಕಾಶ ಭೂಮಿಗಳ ಅಧಿಪತಿಯಾದ ದೇವನು ನನಗೆ ತಿಳಿಸಿರುವನು. **(ಬರಾಹೀನೆ ಅಹ್ಮದಿಯಾ, ಭಾಗ 5; ರೂಹಾನೀ ಖಝಾಇನ್ ಸಂಪುಟ 21, ಪುಟ 427)**

## ಅಹ್ಮದಿ ವಿದ್ಯಾರ್ಥಿಗಳು ಗಮನಹರಿಸಬೇಕು (ಜಾಮಿಯ ಅಹ್ಮದಿಯಾ ಖಾದಿಯಾನ್‌ನಲ್ಲಿ ಪ್ರವೇಶ)

ಜಾಮಿಯಾ ಅಹ್ಮದಿಯಾ ಖಾದಿಯಾನ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಸ್ಥಾಪಿಸಿರುವ ಪವಿತ್ರ ಸಂಸ್ಥೆಯಾಗಿದ್ದು, ಅಲ್ಲಿ ನೂರಾರು ವಿದ್ವಾಂಸರು ಮತ್ತು ಮುಬಲ್ಲಿಗೀನರು (ಬೋಧಕರು) ಪದವಿ ಪಡೆದಿದ್ದಾರೆ ಮತ್ತು ಇಸ್ಲಾಂ ಧರ್ಮದ ನಿಜವಾದ ಬೋಧನೆಗಳನ್ನು ಪ್ರಪಂಚದ ಮೂಲೆಗಳಿಗೆ ಹರಡುವ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. ಸಯ್ಯಿದುನಾ ಹುಝೂರ್ ಅನ್ವರ್(ಅತಬಿಅ) ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಸ್ಥಾಪಿಸಿದ ಈ ಪವಿತ್ರ ಧಾರ್ಮಿಕ ಸಂಸ್ಥೆಯಿಂದ ಶಿಕ್ಷಣವನ್ನು ಪಡೆಯುವ ಮೂಲಕ ಸರಣಿಯ ಸೇವೆಯತ್ತ ಅಹ್ಮದಿ ವಿದ್ಯಾರ್ಥಿಗಳ ಗಮನವನ್ನು ಹಲವಾರು ಸಂದರ್ಭಗಳಲ್ಲಿ ಸೆಳೆದಿದ್ದಾರೆ. ಆದ್ದರಿಂದ, ಹುಝೂರ್ ಅನ್ವರ್(ಅತಬಿಅ) ಅವರ ಸೂಚನೆಗಳ ಬೆಳಕಿನಲ್ಲಿ, ಹೆಚ್ಚು ಹೆಚ್ಚು ವಾಖಿಫೀನೆ ನೌ ಹಾಗೂ ವಾಖಿಫೀನ್ ಅಲ್ಲದ ಹೊಸ ವಿದ್ಯಾರ್ಥಿಗಳನ್ನು ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶವನ್ನು ಪಡೆದು ಧಾರ್ಮಿಕ ಶಿಕ್ಷಣವನ್ನು ಪಡೆದುಕೊಂಡು ಸರಣಿಯ (ಜಮಾಅತ್ತಿನ) ಸೇವೆಗೆ ತಮ್ಮನ್ನು ತಾವು ಅರ್ಪಿಸಿಕೊಳ್ಳಬೇಕು.

ಜಾಮಿಯಾ ಅಹ್ಮದಿಯಾದಲ್ಲಿ 2022-2023ರ ಶೈಕ್ಷಣಿಕ ವರ್ಷಕ್ಕೆ ಪ್ರವೇಶ ಪ್ರಕ್ರಿಯೆಯು ಏಪ್ರಿಲ್ 2022 ರಿಂದ ಪ್ರಾರಂಭವಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಜಾಮಿಯಾ ಅಹ್ಮದೀಯಕ್ಕೆ ಪ್ರವೇಶ ಬಯಸುವ ವಿದ್ಯಾರ್ಥಿಗಳ ಪ್ರವೇಶ ಪ್ರಕ್ರಿಯೆಯನ್ನು ಆನ್‌ಲೈನ್ ಮುಖಾಂತರ ನಡೆಸಲಾಗುತ್ತಿದೆ. ಆದ್ದರಿಂದ, ಜಾಮಿಯಾ ಅಹ್ಮದಿಯಕ್ಕೆ ಸೇರಲು ಬಯಸುವ ವಿದ್ಯಾರ್ಥಿಗಳು ವಖ್ಫೆನೌ ಭಾರತ್ (ನಝಾರತ್ ತಅ್‌ಲೀಮ್) ಅನ್ನು ಸಂಪರ್ಕಿಸಿ ಹಾಗೂ ಸಾಧ್ಯವಾದಷ್ಟು ಬೇಗ ಜಾಮಿಯಾ ಅಹ್ಮದಿಯಾ ಪ್ರವೇಶ ಪತ್ರವನ್ನು ಭರ್ತಿ ಮಾಡಿ ಅದನ್ನು ವಖ್ಫೆನೌ ಭಾರತ್ (ನಝಾರತ್ ತಅ್‌ಲೀಮ್)ನ ಕಚೇರಿಗೆ E-mail ಅಥವಾ ಪೋಷ್ಟ್ ಮೂಲಕ ಕಳುಹಿಸಬೇಕು. ಪ್ರವೇಶದ ಷರತ್ತುಗಳಿಗಾಗಿ ವಖ್ಫೆನೌ ಭಾರತ್ (ನಝಾರತ್ ತಅ್‌ಲೀಮ್)ನ ಇಲಾಖೆಯನ್ನು ಸಂಪರ್ಕಿಸಬಹುದು.

**(ಸದರ್ ಕೆರಿಯರ್ ಪ್ಲಾನಿಂಗ್ ಕಮಿಟಿ ವಖ್ಫೆ ನೌ ಭಾರತ)**

## *127 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 127ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 23, 24 ಮತ್ತು 25ನೇ ಡಿಸೆಂಬರ್ 2022 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮುಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

## ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ವಾರ್ಷಿಕ ಇಜ್ತೆಮಾ ನಡೆಯುವ ದಿನಾಂಕಗಳು

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 21, 22 ಮತ್ತು 23ನೇ ಅಕ್ಟೋಬರ್ 2022 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

## ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ವಾರಪತ್ರಿಕೆ "ಬದರ್" ಇದೀಗ ಕನ್ನಡದಲ್ಲಿ ಪ್ರಕಟಗೊಳ್ಳುತ್ತಿದೆ.

ಈ ಪತ್ರಿಕೆಯ ಹೆಸರು **"ಬದರ್"** ಎಂದಾಗಿದೆ. ಪೂರ್ಣ ಚಂದ್ರ ಎಂದರ್ಥ. ಇದು ಜಮಾಅತೆ ಅಹ್ಮದಿಯದ ಒಂದು ಧಾರ್ಮಿಕ ಪತ್ರಿಕೆ ಆಗಿದೆ ಅದರ ಮೂಲ ಉದ್ದೇಶ ಜಮಾಅತ್ತಿನ ಸದಸ್ಯರ ತರಬೇತಿ, ಶಿಕ್ಷಣ, ಒಳ್ಳೆ ನೈತಿಕತೆ ಕಲಿಸುವುದಾಗಿದೆ.

ನಮ್ಮ ಎರಡು ಉದ್ದೇಶಗಳಿವೆ. ಒಂದು ಅಲ್ಲಾಹನ ಹಕ್ಕನ್ನು ನಿಭಾಯಿಸುವುದು ಇನ್ನೊಂದು ದಾಸರ ಹಕ್ಕನ್ನು ನಿಭಾಯಿಸುವುದಾಗಿದೆ.

ಅಲ್ಲಾಹನ ಹಕ್ಕು ಏನಾಗಿದೆ ಎಂದರೆ ಅವನನ್ನು ಆರಾಧಿಸುವುದು ಅವನು ಎಲ್ಲಾ ಸ್ತುತಿ ಸರ್ವ ಲೋಕಗಳ ಪರಿಪಾಲಕನಾಗಿದ್ದಾನೆ ಮತ್ತು ಅವನ ಉಪಕಾರಗಳನ್ನು ನೆನಪಿಸಿಕೊಂಡು ಅವನಿಗೆ ವಿಧೇಯತೆ ತೋರಿಸುವುದಾಗಿದೆ.

ಇನ್ನೊಂದು ದಾಸರ ಹಕ್ಕನ್ನು ನಿಭಾಯಿಸುವುದಾಗಿದೆ. ದಾಸರ ಹಕ್ಕುಗಳೇನಂದರೆ ಅಗತ್ಯವುಳ್ಳವರನ್ನು ಸಹಾಯ ಮಾಡುವುದು, ಯಾರನ್ನು ದುಃಖ, ತೊಂದರೆ ಅಥವಾ ಸಂಕಷ್ಟ ಕೊಡಬಾರದು, ರಾಷ್ಟ್ರದಲ್ಲಿ ಕಿಡಿಗೇಡಿತನ ಹುಟ್ಟಿಸಬಾರದು, ಸ್ವದೇಶ ಪ್ರೇಮ ಈಮಾನಿನ ಒಂದು ಭಾಗವಾಗಿದೆ ಹಾಗೂ ಸ್ವದೇಶದ ಅಭಿವೃದ್ಧಿಗಾಗಿ ಶ್ರಮವಹಿಸುವುದಾಗಿದೆ.

ಈ ಪತ್ರಿಕೆಯು 100 ವರ್ಷಕ್ಕಿಂತ ಹೆಚ್ಚು ಕಾಲಾವಧಿಯಿಂದ ಈ ಉದ್ದೇಶದ ಪ್ರಕಾರ ಜಮಾಅತ್ತಿನ ಸದಸ್ಯರ ಶೈಕ್ಷಣಿಕವಾಗಿ ತರಬೇತಿ ಮಾಡುತ್ತಾ ಬಂದಿದೆ. ಅದರ ಪ್ರತಿ ಫಲವಾಗಿ ನಮಗೆ ಅಲ್ಲಾಹನ ಅನುಗ್ರಹದಿಂದ ಶಾಂತಿಯುತ ಪಂಗಡ ಎಂದು ವಿಶ್ವದಾದ್ಯಂತ ಪರಿಗಣಿಸುತ್ತಾರೆ.

ಅಕ್ಟೋಬರ್ 1902ರಲ್ಲಿ ಜಾಗತಿಕ ಅಹ್ಮದಿಯ ಮುಯಸ್ಲಿಮ್ ಜಮಾಅತ್ತಿನ ಸಂಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ(ಅಲೈಹಿಸ್ಸಲಾಮ್) ಅವರು ಈ ಪತರಿಕೆಯನ್ನು ಉರ್ದು ಭಾಷೆಯಲ್ಲಿ ಉದ್ಘಾಟಿಸಿದರು. ಇಂದು ಈ ಪತ್ರಿಕೆಯು ಭಾರತದ ಏಳು ಭಾಷೆಗಳಲ್ಲಿ ಭಾಷಾಂತರವಾಗಿ ಪ್ರಕಟಗೊಳ್ಳುತ್ತಿದೆ. ಉರ್ದುವನ್ನು ಬಿಟ್ಟು ಹಿಂದಿ, ತಮಿಳು, ತೆಲುಗು, ಬಾಂಗ್ಲ, ಉಡಿಯಾ, ಮಳಯಾಳಂ ಹಾಗೂ ಕನ್ನಡ. ಕಳೆದ 2.5 ವರ್ಷದಿಂದ ಕನ್ನಡದಲ್ಲಿಯು ಈ ಪತ್ರಿಕೆಯು ಪ್ರಕಟಗೊಳ್ಳುತ್ತಿರುವುದು ಬಹಳ ಸಂತೋಷದ ವಿಷಯವಾಗಿದೆ. ಈ ಪತ್ರಿಕೆಯು ಧಾರ್ಮಿಕ ಪತ್ರಿಕೆ ಆದ್ದರಿಂದ ರಾಜಕೀಯ ನಿಟ್ಟಿನಲ್ಲಿ ಯಾವ ಸಂಬಂಧವೂ ಇಲ್ಲ.

ಈ ಪತ್ರಿಕೆಯಲ್ಲಿ ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್‌ರವರ ಶುಕ್ರವಾರದ ಪ್ರವಚನ (ಖುತ್‌ಬ ಜುಮುಅ) ವಿಶೇಶವಾಗಿರುತ್ತದೆ. ಆ ಖುತ್‌ಬದಲ್ಲಿ ಅವರು ಪವಿತ್ರ ಖುರ್‌ಆನ್ ಹಾಗೂ ಹದೀಸ್‌ಗಳ ಶಿಕ್ಷಣಗಳ ಪ್ರಕಾರ ತಮ್ಮ ಜಮಾಅತ್ತಿನ ಸದಸ್ಯರನ್ನು ಸಂಬೋಧಿಸುತ್ತಾರೆ. ನಿಮ್ಮ ಈ ಪ್ರವಚನವೂ ಎಂ.ಟಿ.ಎ ಎಂಬ ಚ್ಯಾನಲ್‌ನಲ್ಲಿ ಪ್ರತಿ ಶುಕ್ರವಾರ ನೇರವಾಗಿ ಪ್ರಸಾರವಾಗುತ್ತದೆ. ಅದನ್ನು ಇಡೀ ವಿಶ್ವದಾದ್ಯಂತ ಕೇಳ ಹಾಗೂ ನೋಡಬಹುದು. ತದನಂತರ ಈ ಖುತ್‌ಬ ಪತ್ರಿಕೆಯಲ್ಲಿ ಪಕಟಗೊಳ್ಳುತ್ತದೆ. ಖಲೀಫರ ಖುತ್‌ಬ ಈ ಪತ್ರಿಕೆಯ ಪ್ರಾಣವಾಗಿದೆ.

ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ವಾಗ್ದಾತ್ತ ಮಹೀಹರ 5ನೇ ಖಲೀಫರಾಗಿದ್ದಾರೆ ಅವರು ಲಂಡನ್‌ನಲ್ಲಿ ವಾಸವಾಗಿದ್ದಾರೆ. ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಇಮಾಮರಾಗಿದ್ದಾರೆ. ಅದಲ್ಲದೆ ಈ ಪತ್ರಿಕೆಯಲ್ಲಿ ಖಲೀಫರ ಪ್ರವಾಸಗಳ ವರದಿಗಳು ಪ್ರಕಟಗೊಳ್ಳುತ್ತದೆ ಅವೂ ಬಹಳ ಕುತೂಹಲಕಾರಿ ಆಗಿರುತ್ತದೆ. ಈ ವರದಿಗಳು ಜಮಾಅತ್ತಿನ ಸದಸ್ಯರ ಜ್ಞಾನ ಅಭಿವೃದ್ಧಿಯಲ್ಲಿ ವಿಶೇಶವಾಗಿ ಕಾರ್ಯ ನಿರ್ವಹಿಸುತ್ತದೆ. ಇದಲ್ಲದೆ ಜಮಾಅತ್ತಿನ ಕಾರ್ಯಗಳ ವರದಿಗಳು ಮತ್ತು ಆಧ್ಯಾತ್ಮಿಕ ಹಾಗೂ ಶೈಕ್ಷಣಿಕ ಅಭಿಮೃದ್ಧಿಸುವಂತಹ ಜ್ಞಾನ ಭರಿತ ಲೇಖನಗಳು ಪ್ರಕಟಗೊಳ್ಳುತ್ತದೆ.

ಹೀಗಾಗಿ ಈ ಪತ್ರಿಕೆಯು ಮಹತ್ವಪೂರ್ಣವಾದ ಪತ್ರಿಕೆ ಆಗಿದೆ.

ಎಲ್ಲಾ ಓದುಗರಲ್ಲಿ ಈ ಪತ್ರಿಕೆಯನ್ನು ಕೊಂಡುಕೊಳ್ಳಬೇಕಾಗಿ ವಿನಂತಿಸಲಾಗುತ್ತಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: +91 99153 79255, 9902678609, 9866358609 (ವ್ಯವಸ್ಥಾಪಕರು)

### ವಿಶೇಶ ಸೂಚನೆ

**"ಬದರ್" ವಾರಪತ್ರಿಕೆಯ ಚಂದಾದಾರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.**
**ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)**

## ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**
"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ಸಂಪುಟ-1 ರೂಹಾನಿ ಖಝಾಇನ್ ಸಂಪುಟ 17, ಪುಟ 345)***

## ಅನ್ಯ ಗೋತ್ರಗಳೊಂದಿಗೆ ವಿವಾಹ

**ಹಝ್ರತ್ ಮಸೀಹ್ ಮೌಊದ್ ಅಲೂಹಿಸ್ಸಲಾಮ್ ಹೇಳುತ್ತಾರೆ:-**
"ನಮ್ಮ ಸಮುದಾಯದಲ್ಲಿ ಕಂಡುಬರುತ್ತಿರುವ ಒಂದು ಕೆಟ್ಟ ಸಂಪ್ರದಾಯವೇನೆಂದರೆ, ನಮ್ಮೊಳಗಿರುವ ಇತರ ಗೋತ್ರಗಳಿಗೆ ಹೆಣ್ಣು ಕೊಡಲು ಹಾಗೂ ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಇದು ಅಹಂಕಾರ ಮತ್ತು ಮತ್ಸರದಿಂದಾಗಿದೆ. ಇದು ಶರೀಅತ್ತಿಗೆ ಅಪ್ಪಟ ವಿರುದ್ಧವೂ ಆಗಿರುತ್ತದೆ. ಎಲ್ಲಾ ಆದಮ್ ಸಂತತಿಗಳು ಏಕದೇವನ ದಾಸರಾಗಿದ್ದಾರೆ. ಹೆಣ್ಣು ಕೊಡುವ ಪಡೆಯುವ ವಿಷಯದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಅವರು ಭಯಭಕ್ತಿ ಹಾಗೂ ಉತ್ತಮ ನಡತೆ ಹೊಂದಿರುವವರಾಗಿರಬೇಕು ಮತ್ತು ಅವರು ಯಾವುದೇ ರೀತಿಯ ಪಿತೂರಿಗೆ ಕಾರಣರಾಗಿರಬಾರದು.

ನೆನಪಿಡಿರಿ! ಇಸ್ಲಾಮಿನಲ್ಲಿ ಕುಲ, ಗೋತ್ರಗಳ ಕುರಿತು ಯಾವುದೇ ತಾರತಮ್ಯವಿಲ್ಲ. ಕೇವಲ ಭಯಭಕ್ತಿ ಮತ್ತು ಸಾತ್ವಿಕತೆಯೇ ಪ್ರಧಾನವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದನು: **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್‌ಹುಜರಾತ್:14) ಅಂದರೆ: ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು." (ಮಲ್ಫೂಝಾತ್ ಸಂಪುಟ-5, ಪುಟ-48-49, ಮುದ್ರಣ ಖಾದಿಯಾನ್ 2003)
**(ನಝಾರತ್ ಇಸ್ಲಾಹ್-ವ-ಇರ್‌ಶಾದ್ (ಮರ್‌ಕಝಿಯಾ, ಖಾದಿಯಾನ್)**

## ಆಡಂಬರ ಮತ್ತು ತೋರ್ಪಡಿಕೆಗೋಸ್ಕರ ಹಕ್ಕ್ ಮಹರನ್ನು ನಿಶ್ಚಯಿಸುವುದು ತಪ್ಪು ಸಂಪ್ರದಾಯವಾಗಿರುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:
ವಧು ಹಾಗೂ ವರನ ಕಡೆಯವರು ಇಬ್ಬರು ಸೇರಿ ರಾಜಿಯಾಗಿ ಹಕ್ಕ್ ಮಹರ್ ನಿಶ್ಚಯಿಸಿ ಕೊಳ್ಳುತ್ತಾರೆ ಇದಕ್ಕೆ ಯಾವುದೇ ಆಕ್ಷೇಪವಿಲ್ಲ. ಆದರೆ ಶರೀಅತ್ತಿನಲ್ಲಿ ಹಕ್ಕ್ ಮಹರ್ ಇಷ್ಟೇ ನೀಡಬೇಕೆಂಬ ನಿಯಮ ಅಧಿಕೃತವಾಗಿ ಹದೀಸುಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ ಆ ಸಂಧರ್ಭಕನ್ನುಸಾರ ಹಕ್ಕ್ ಮಹರ್ ನಿಶ್ಚಯಿಸಿಕೊಳ್ಳಬಹುದು. ಅಂದರೆ ಪ್ರಸಕ್ತ ಸಮಯದಲ್ಲಿನ ಜನರ ಜೀವನ ಮಟ್ಟವೇ ಆಧಾರವಾಗಿರುತ್ತದೆ.

ನಮ್ಮ ಪ್ರಾಂತ್ಯದಲ್ಲಿರುವ ಒಂದು ಕೆಟ್ಟ ಸಂಪ್ರದಾಯವೆಂದರೆ ಕೇವಲ ಹೊರ ಜಗತ್ತಿನ ತೋರಿಕೆಗಾಗಿ ಹಾಗೂ ಆಡಂಬರಕ್ಕಾಗಿ ಲಕ್ಷಾಂತರ ಹಕ್ಕ್ ಮಹರ್ ಅನ್ನು ನಿಶ್ಚಿಸಿಕೊಳ್ಳುತ್ತಾರೆ. ಆದರೆ ಅವರ ಉದ್ದೇಶ ಬೇರೆಯೇ ಅಗಿರುತ್ತದೆ. ಅದೇ ರೀತಿ ವಧುವಿನ ಕಡೆಯವರು ವರನನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳಲು ಈ ರೀತಿಯ ಹಕ್ಕ್ ಮಹರ್‌ಅನ್ನು ನಿಶ್ಚಯಿಸಿಕೊಳ್ಳುತ್ತಾರೆ. ಆದರೆ ಇದರಿಂದ ಬೇರೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ. **(ಮಲ್‌ಫೂಝಾತ್, ಸಂಪುಟ-3, ಪುಟ-284)**
**(ರಿಶ್ತನಾತ ವಿಭಾಗ, ನಝಾರತ್ ಇಸ್ಲಾಹ್ ವ ಇರ್ಷಾದ್, ಖಾದಿಯಾನ್)**

**ಪ್ರೀತಿ ಎಲ್ಲರಲ್ಲೂ, ದ್ವೇಶವಿಲ್ಲ ಯಾರಲ್ಲೂ**

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 12 May 2022, Issue No. 19

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 18ರ ಉಳಿದ ಭಾಗ)**

ಹುಝೂರ್ ಅನ್ವರ್ ಹೇಳಿದರು. ಅವುಗಳಲ್ಲದೇ ನಮ್ಮ ಹಲವು ಆಸ್ಪತ್ರೆಗಳು ಮತ್ತು ಆರೋಗ್ಯ ಘಟಕಗಳು ಸಹ ಇವೆ ಅವು ಮಾನವೀಯ ಸೇವೆ ಮಾಡುತ್ತಿವೆ. ಅದೇ ರೀತಿ ತಾರತಮ್ಯವಿಲ್ಲದೇ ಆಫ್ರಿಕಾದಂತಹ ದೂರ ದೇಶಗಳಲ್ಲಿ ನಾವು ನೀರನ್ನು ಒದಗಿಸುತ್ತಿದ್ದೇವೆ. ಇಲ್ಲಿ ವಾಸಿಸುವ ಜನರಿಗೆ, ನಿಮ್ಮ ಹೋಟೇಲುಗಳಲ್ಲಿ ಹೋಗಿ ನೋಡಿದರೆ wash rooms ನಲ್ಲಿ ಬರೆದಿರುತ್ತದೆ. ನೀರನ್ನು ಕಡಿಮೆ ಬಳಸಿರಿ, ನೀರು ಅಮೂಲ್ಯ ವಸ್ತುವಾಗಿದೆ. ಆದರೆ ಅದರ ಹೊರತಾಗಿಯೂ ನೀರು ಅಪಬಳಕೆ ಮಾಡುತ್ತಾರೆ. ನಿಮ್ಮ ಮನೆಗಳಲ್ಲಿ ನಿಮಗೆ ಅದರ ಚಿಂತೆಯಿರುವುದಿಲ್ಲ. ನೀವು ನಳ್ಳಿ ತೆರೆದರೆ ನೀರು ಬರುತ್ತದೆ. ಆದರೆ ಆಫ್ರಿಕಾದಲ್ಲಿ ನಾನು 8 ವರ್ಷಗಳನ್ನು ಕಳೆದಿದ್ದೇನೆ. ನನಗೆ ಅನುಭವವಿದೆ. ಅಲ್ಲಿಯ ಜನರು ನೀರಿಗಾಗಿ ಎಷ್ಟೊಂದು ಪರದಾಡುತ್ತಾರೆ ಎಂದು. ನಿಮ್ಮ ಮಕ್ಕಳು 7, 8 ವರ್ಷದವರಾದರೆ ನೀವು ಅವರ ಒಳ್ಳೆಯ ಆಹಾರಕ್ಕಾಗಿ, ಅವರ ಉತ್ತಮ ಬೆಳವಣಿಗೆಗಾಗಿ, ಅವರ ಉತ್ತಮ ಶಿಕ್ಷಣಕ್ಕಾಗಿ ಚಿಂತಿಸುತ್ತೀರಿ. ಆದರೆ ಆ ವಯಸ್ಸಿನ ಮಕ್ಕಳು ಅಲ್ಲಿ ತಮ್ಮ ತಲೆಯ ಮೇಲೆ ಬಾಲ್ಟಿಗಳನ್ನು ಹೊತ್ತುಕೊಂಡು ಎರಡು ಮೂರು ಕಿಲೋಮೀಟರಿನವರೆಗೆ ನಡೆದುಕೊಂಡು ಹೋಗಿ ಅಲ್ಲಿಯ ಹೊಲಸು ಕೆರೆಗಳ ನೀರು ತುಂಬಿಕೊಂಡು ಮನೆಗಳಿಗೆ ತೆರಳುತ್ತಾರೆ. ಇಂತಹ ಧಾರುಣ ಸ್ಥಿತಿಯಿದೆ. ಅಹ್ಮದಿಯಾ ಜಮಾಅತ್ ಅಂತಹ ಮನೆಗಳಿಗೆ ಕುಡಿಯುವ ನೀರು ಒದಗಿಸುವ ಪ್ರಯತ್ನದಲ್ಲಿದೆ. ಅವರು ತಂದ ಕೆರೆಗಳ ನೀರು ಎಷ್ಟೊಂದು ಹೊಲಸಿರುತ್ತದೆ ಎಂದರೆ ನೀವು ಕೈಗಳನ್ನು ತೊಳೆದುಕೊಳ್ಳಲು ಹಿಂಜರಿಯುವಿರಿ. ಆದರೆ ಅಂತಹ ನೀರು ಕುಡಿಯಲಿಕ್ಕೆ ಅವರು ವಿವಶರಾಗಿದ್ದಾರೆ. ಅಹ್ಮದಿಯಾ ಜಮಾಅತ್ ಅಂತಹವರನ್ನು ಶುದ್ಧ ನೀರು ಒದಗಿಸಲು ಪರಿಯೋಜನೆಗಳನ್ನು ಪ್ರಾರಂಭಿಸಿದೆ ಮತ್ತು Pump ಹಾಕುತ್ತಿದೆ. UN ಹಚ್ಚಿದ Pump ಗಳು ಕೆಟ್ಟು ಹೋಗಿವೆ. ಅವುಗಳನ್ನು ಕೇಳುವವರೂ ಇಲ್ಲ. ಅವುಗಳನ್ನು Rehabilitate ಸಹ ಮಾಡಲಾಯಿತು. ಅವರಿಗೆ ಶುದ್ಧ ಕುಡಿಯುವ ನೀರು ದೊರೆಯುವಂತಾಗಲಿ ಎಂದು. ಈ ಪಂಪುಗಳನ್ನು ಹಾಕಲಾದ ನಂತರ ಮತ್ತು ಅದರಿಂದ ಶುದ್ಧ ನೀರು ಬರುವಾಗ ಅಲ್ಲಿಯ ಜನರ, ಸ್ತ್ರೀಯರ ಮತ್ತು ಮಕ್ಕಳ ಮುಖದಲ್ಲಿ ಅರಳುವ ಸಂತೋಷ ನೋಡುವ ಯೋಗ್ಯವಿರುತ್ತದೆ. ಯಾವ ರೀತಿ ಅಲ್ಲಾಹನು ಅವರಿಗೆ ಶುದ್ಧ ನೀರನ್ನು ಒದಗಿಸಿದ್ದಾನೆ ಮತ್ತು ಅವರು ನಾಲ್ಕು ನಾಲ್ಕು ಕಿ.ಮೀಟರ್ ದೂರ ಹೋಗಿ ಒಂದು ಬಾಟಲಿ ನೀರು ಹೊತ್ತು ತರುವ ಕಷ್ಟದಿಂದ ಪಾರಾದರು. ಹಾಗೆ ಈ ರೀತಿಯ ಕಾರ್ಯಗಳಾಗಿವೆ. ಅವುಗಳನ್ನು ಅಹ್ಮದಿಯಾ ಜಮಾಅತ್ ಮಾನವೀಯ ಸೇವೆಗಾಗಿ ಮಾಡುತ್ತಿದೆ.

ಹುಝೂರ್ ಅನ್ವರ್ ಹೇಳಿದರು. ಮತ್ತು ಅದೇ ರೀತಿ ಅಹ್ಮದಿಯಾ ಜಮಾಅತ್ Model village project ಸಹ ನಡೆಸುತ್ತಿದೆ. ಅವುಗಳ ಮೂಲಕ ಅಲ್ಲಿಯ ಜನರಿಗೆ Street lights ಒದಗಿಸಲಾಗುತ್ತಿದೆ. ಸಮುದಾಯ ಭವನಗಳನ್ನು ನಿರ್ಮಿಸಿ ಕೊಡಲಾಗುತ್ತದೆ ಮತ್ತು Green House ನಿರ್ಮಿಸಿ ಅವರಿಗೆ ಒಂದಿಷ್ಟು ಸ್ಥಳೀಯ ನೆಲೆಯಲ್ಲಿ ತರಕಾರಿ ಇತ್ಯಾದಿಗಳನ್ನು ಬೆಳೆಸಲು ಸಂದರ್ಭ ಮಾಡಿಕೊಡಲಾಗುತ್ತಿದೆ. ಅದೇ ರೀತಿ ನೀರಿನ Project ಸಹ ಅದರಲ್ಲಿ ಒಳಗೊಂಡಿದೆ.

ಇದು ಯಾವುದೇ ವಿಶೇಷ ಸ್ಥಳದಲ್ಲಿ ಆಗುತ್ತಿಲ್ಲ. ಬದಲು ಎಲ್ಲಾ ಕಡೆ ಧರ್ಮಬೇಧವಿಲ್ಲದೇ ಈ Project ಗಳು ನಡೆಯುತ್ತಿವೆ. ಹಾಗೆ ಮಾನವ ಸೇವೆ ಬಹುಮುಖ್ಯ ಕಾರ್ಯವಾಗಿದೆ. ಅದನ್ನು ಅಹ್ಮದಿಯಾ ಜಮಾಅತ್ ಮಾಡುತ್ತಿದೆ.

ಹುಝೂರ್ ಅನ್ವರ್ ನುಡಿದರು. ಹಲವು ಚರ್ಚ್‌ಗಳು ಸಹ ಇಂತಹ ಕಾರ್ಯ ಮಾಡುತ್ತಿವೆ ಮತ್ತು ವಿಶಾಲ ನೆಲೆಯಲ್ಲಿ ಮಾಡುತ್ತಿವೆ. ಆದರೆ ಅಹ್ಮದಿಯಾ ಜಮಾಅತಿನ ವೈಶಿಷ್ಟ್ಯವೇನೆಂದರೆ, ನೀವು ನೋಡುತ್ತಿದ್ದೀರಿ. ಈ ಮಸೀದಿ ತಯಾರಿಸಿವರು ಸ್ವಯಂ ಸೇವಕರಾಗಿರುತ್ತಾರೆ. ಬಹಳಷ್ಟು ಕೆಲಸಗಳು ಅವರು ಸ್ವಯಂ ಮಾಡಿರುತ್ತಾರೆ. ನಮ್ಮ ಯೂರೋಪ್ ನಿಂದ ಮತ್ತು ಇತರ ದೇಶಗಳಿಂದ ವಿದ್ಯಾವಂತ ಇಂಜಿನಿಯರ್ಸ್, ಡಾಕ್ಟರ್ಸ್, ಮತ್ತು ಇತರರು ಸ್ವಯಂ ಸೇವಕರಾಗಿ ತಮ್ಮ ಖರ್ಚಿನಲ್ಲಿ ಬರುತ್ತಾರೆ. ಇಲ್ಲಿ ಕಾರುಗಳಲ್ಲಿ ಕುಳಿತು ಪ್ರಯಾಣ ಮಾಡುವವರು, ನಗರವಾಸಿಗಳು ಮತ್ತು ಯೂರೋಪ್ ನಿವಾಸಿಗಳು ಆಟೋವ್ಯಾನ್ ಇಲ್ಲದೇ ಒಂದು ನಗರದಿಂದ ಇನ್ನೊಂದು ನಗರಕ್ಕೆ ಹೋಗುವುದನ್ನು ಊಹಿಸಿರುವುದಿಲ್ಲ, ಅಥವಾ ಒಳ್ಳೆಯ ರಸ್ತೆಯಿಲ್ಲದೇ ಮುಂದೆ ಹೋಗುವುದಿಲ್ಲ, ಅಂತಹವರು ಅಲ್ಲಿ ಹೋಗಿ, ಆ ರಸ್ತೆಗಳಲ್ಲಿ, ಮೋಟಾರ್ ಸೈಕಲ್‌ನಲ್ಲಿ, ಕೆಲ ಸಮಯ ಬರಿ ಸೈಕಲ್‌ಗಳಲ್ಲಿ ಹೋಗಿ ಜನರಿಗೆ ಸೇವೆ ಸಲ್ಲಿಸುತ್ತಾರೆ. ಒಬ್ಬರು 4 ವಾರಗಳಿಗೆ ತಮ್ಮನ್ನು ತಾವು ಅರ್ಪಿಸಿದರೆ ಒಬ್ಬರು 8 ವಾರಗಳಿಗಾಗಿ, ಈ ರೀತಿಯ ಮಾನವೀಯ ಸೇವೆ ಅಲ್ಲಾಹನ ಅನುಗ್ರಹದಿಂದ ಅವನ ಕಾರುಣ್ಯದಿಂದ ಅಹ್ಮದಿಯಾ ಜಮಾಅತ್ ಮಾಡುತ್ತಿದೆ.

ಹುಝೂರ್ ಅನ್ವರ್ ನುಡಿದರು. ಹಾಗೆ ಇದು ಅಹ್ಮದಿಯಾ ಜಮಾಅತಿನ ಕಾರ್ಯವಾಗಿದೆ. ಈ ಕಾರ್ಯಕ್ಕಾಗಿಯೇ ಅಹ್ಮದಿಯಾ ಜಮಾಅತ್ ಲೋಕದೆಲ್ಲೆಡೆ ತನ್ನ ಸಂದೇಶ ರವಾನಿಸುತ್ತಿದೆ. ನನಗೆ ಭರವಸೆಯಿದೆ. ಈ ಮಾತುಗಳನ್ನು ನೀವು ಕೇಳಿರಬಹುದು. ಮತ್ತು ಅಹ್ಮದಿಯರಿಂದ ಅದನ್ನು ಮನಗಂಡಿರಬೇಕು. ಆ ಕಾರಣದಿಂದಾಗಿಯೇ ಅಹ್ಮದಿಯರೊಂದಿಗೆ ನಿಮ್ಮ ಈ ರೀತಿಯ ಸಂಬಂಧಗಳಿವೆ. ನನಗೆ ಇಲ್ಲಿ ಅನೇಕ ಸ್ಥಳೀಯ ಜನರು ಕಾಣುತ್ತಿದ್ದಾರೆ. ಅಹ್ಮದಿಯಾ ಜಮಾಅತಿನಿಂದ ಅವರಿಗೆ ಯಾವ ಸಂಬಂಧವೂ ಇಲ್ಲದಿದ್ದರು ನಮ್ಮ ಧಾರ್ಮಿಕ ಸಮಾರಂಭದಲ್ಲಿ ಅವರು ಭಾಗವಹಿಸುತ್ತಿದ್ದಾರೆ. ಅಲ್ಲಾಹನು ನಿಮಗೆ ಅದರ ತಕ್ಕುದಾದ ಪ್ರತಿಫಲವನ್ನು ನೀಡುವಂತಾಗಲಿ.

ಹುಝೂರ್ ಅನ್ವರ್ ಹೇಳಿದರು ನಮ್ಮ ಅಮೀರ್ ಸಾಹೇಬರು ಇಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಈ ನಗರ ಗಂಡು ಮಕ್ಕಳ ಜನನ ನೆಲೆಯಲ್ಲಿ ತುಂಬಾ ಪ್ರಸಿದ್ಧವಾಗಿದೆ ಅಥವಾ ಪ್ರಸಿದ್ಧವಿತ್ತು. ಅನುವಾದಿಸುವವರು ಅವರ ಈ ಮಾತಿಗೆ ಹೀಗೆ ಅನುವಾದ ಮಾಡಿದ್ದರು. ಅಹ್ಮದಿಯಾ ಜಮಾಅತ್ ಅದೇ ಕೆಲಸ ಮಾಡುತ್ತಿದೆ. ನನಗೆ ಅರ್ಥವಾಗಲಿಲ್ಲ. ಅದರ ತಾತ್ಪರ್ಯವೇನು. ಆದರೆ ಅದರ ತಾತ್ಪರ್ಯ ಸಂತಾನ ಉತ್ಪತ್ತಿಯ ಕಾರ್ಯ ಜಮಾಅತ್ ಅಹ್ಮದಿಯಾ ಮಾಡುತ್ತಿದೆ ಎಂದಾದರೆ ಅದೊಂದು ಒಳ್ಳೆಯ ಮಾತಾಗಿದೆ. ಅಲ್ಲಾಹನು ಜಮಾಅತಿಗೆ ಹೆಚ್ಚಿನ ಸಂತಾನವನ್ನು ದಯಪಾಲಿಸಲಿ, ಸರಿಯಾದ ರೀತಿಯಲ್ಲಿ ಅವರಿಗೆ ಶಿಕ್ಷಣ ತರಬೇತಿ ನೀಡಿ ಈ ನಗರಕ್ಕಾಗಿ ಇನ್ನಷ್ಟು ಮಾದರಿಗಳನ್ನು ಖಾಯಂಗೊಳಿಸುವಂತಾಗಲಿ. ಹಾಗೆ ಮುಂದಿನ ಪೀಳಿಗೆಗಳಲ್ಲಿ ಸತ್ಕರ್ಮಗಳನ್ನು ಜಾರಿಗೊಳಿಸುವುದು ಸಹ ಮುಖ್ಯ ಮಾತಾಗಿದೆ. ಅದರತ್ತ ಅಹ್ಮದಿಯಾ ಜಮಾಅತ್ ಗಮನ ನೀಡುತ್ತದೆ ಮತ್ತು ಗಮನ ನೀಡಬೇಕಾಗಿದೆ.

ಹುಝೂರ್ ಅನ್ವರ್ ಹೇಳಿದರು. ನಮ್ಮ ರಾಷ್ಟ್ರೀಯ ಅಮೀರ್ ಸಾಹಿಬರು ಮಸೀದಿಗಳ ಗುಣಗಳನ್ನು ವಿವರಿಸುತ್ತ ಒಂದು ಮಾತನ್ನು ಹೇಳಿದ್ದಾರೆ. ಈ ಮಸೀದಿ ಕಲ್ಲಿನಿಂದ ಮಾಡಲಾಗಿದೆ ಎಂದು, ಒಂದಂತೂ ಬಾಹ್ಯ ಸೌಂದರ್ಯದ ಮಾಥಾಗಿದೆ. ಆದರೆ ಕಲ್ಲು ನಿಮಿತ್ತ ಕೆಟ್ಟ ಉದಾಹರಣೆಗಳು ಇವೆ. ನಮ್ಮಲ್ಲಿ ಒಂದು ಉದಾಹರಣೆ ಪ್ರಚಲಿತವಿದೆ. ಯಾವ ಮನುಷ್ಯ ಇತರರ ಭಾವನೆಗಳನ್ನು ಲೆಕ್ಕಿಸುವುದಿಲ್ಲ. ಇತರರ ಬಗ್ಗೆ ಯೊಚಿಸುವುದಿಲ್ಲ. ಇತರರ ಮಾತುಗಳನ್ನು ಅರಿಯಲು ಪ್ರಯತ್ನಿಸುವುದಿಲ್ಲ. ಅವನಿಗೆ "ಕಲ್ಲು ಹೃದಯಿ" ಎನ್ನುತ್ತಾರೆ. ಆದರೆ ಪವಿತ್ರ ಖುರ್‌ಆನ್ ನಮಗೆ ಬೇರೆ ಒಂದು ಉದಾಹರಣೆ ಸಹ ನೀಡಿದೆ. ಕೆಲ ಜನರು ಕಲ್ಲು ಹೃದಯಿಗಳಾಗಿರುತ್ತಾರೆ. ಕೆಲವರು ಇಲ್ಲ, ಕೆಲವರು ಕಲ್ಲಿಗಿಂತಲೂ ಹೆಚ್ಚು ಕಠಿಣವಾಗಿರುತ್ತಾರೆ. ಕಲ್ಲಿನಿಂದಲೂ ಕೆಲವೊಮ್ಮೆ ನೀರು ಚಿಮ್ಮುತ್ತದೆ. ಆಶಿಸುವುದೇನೆಂದರೆ ಅಹ್ಮದಿಯಾ ಜಮಾಅತಿನ ಆ ಜನರು ಯಾರೂ ಈ ಆರಾಧನೆಗೋಸ್ಕರ ಈ ಮಸೀದಿಗೆ ಬರುವರೋ, ಕಲ್ಲಿನಿಂದ ನಿರ್ಮಾಣಗೊಂಡಿದ್ದನ್ನು ನೋಡಿ ಅವರ ಹೃದಯಗಳು ಕಲ್ಲಿನ ರೀತಿ ಕಠಿಣವಾಗಿರಬಾರದು. ಬದಲು, ಕಲ್ಲಿನಿಂದ ನೀರು ಚಿಮ್ಮುವ ರೀತಿಯ ಕಲ್ಲುಗಳಾಗಲೀ, ಪ್ರತಿಯೊಬ್ಬ ಇಲ್ಲಿ ಆರಾಧನೆಗೆ ಬರುವ ಅಹ್ಮದಿಯ ಹೃದಯ ಹೀಗೆಯೇ ಆಗಲಿ. ಅದರಲ್ಲಿ ಇತರರಿಗಾಗಿ ಪ್ರೀತಿಯಿರಲಿ, ಪ್ರೇಮದ ಸರೋವರ ಚಿಮ್ಮಿರಿ. ಅದೇ ನಮ್ಮ ಉದ್ದೇಶವಾಗಿದೆ, ಅದೇ ರೀತಿ ಲೋಕದಲ್ಲಿ ಪ್ರೀತಿ ಸ್ನೇಹ ಬೆಳೆಸುವವರಾಗಲಿ, ಆಗ ಮಾತ್ರ ನಮ್ಮ ಈ ಘೋಷಣೆ– "ಪ್ರೀತಿ ಎಲ್ಲರಿಗಾಗಿ ದ್ವೇಷ ಯಾರೊಡನೆಯೂ ಬೇಡ" ಕಾರ್ಯ ಸಾಧಿಸಲಾಗುವುದು. ಅಂದಹಾಗೆ ಅಹ್ಮದಿಯಾ ಜಮಾಅತಿನ ಮೇಲೆ ಬಹುದೊಡ್ಡ ಹೊಣೆಗಾರಿಕೆ ಇದೆ ಮತ್ತು ನಾನು ಆಶಿಸುತ್ತೇನೆ. ಅಹ್ಮದಿಯರು ಈ ಹೊಣೆಗಾರಿಕೆಯನ್ನು ನಿಭಾಯಿಸಲು ಪ್ರಯತ್ನ ಮಾಡುವರು ಎಂದು. ನಾಗರಿಕರಾದ ನಿಮ್ಮಲ್ಲಿಯೂ ಹೇಳುವೆನು. ಈ ಹೊಣೆಗಾರಿಕೆ ನಿಬಾಯಿಸದಂತೆ ಕಾಣುವುದಾದರೆ ನನಗೆ ಅವಶ್ಯವಾಗಿ ತಿಳಿಸಬಹುದು.

**(ಮುಂದುವರಿಯುವುದು)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.